# ಶಿಕ್ಷಣ
# ಮತ್ತು
# ವಿದ್ಯಾರ್ಥಿ ಚಳುವಳಿ

**ಶಿವದಾಸ್ ಘೋಷ್**

**ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟುಡೆಂಟ್ಸ್ ಆರ್ಗನೈಸೇಷನ್**
**(AIDSO)**
**ಕರ್ನಾಟಕ ರಾಜ್ಯ ಸಮಿತಿ**

**'Vidyarthi haagu Shikshana'** is a compilation of two articles, **'Vidyarthi haagu Yuvajanara Mundiruva Karthavyagalu'** a translation of **'Tasks Ahead of Students and Youth'** and **'Namma Shaikshanika haagu Samskruthika Samasyegalige Ondu Vignanika Dristikona'** a translation of **'Scientific approach to our educational and Cultural problems' both by Comrade Shibdas Ghosh & published by AIDSO & SUCI(C)** respectively by Comrade Shibdas Ghosh' published by AIDSO

Edited by:

**V.N.Rajashekar**
On behalf of AIDSO, Karnataka State Committee,
No. 31, 3rd Cross, Malleswaram, Bangalore-560 003
Ph: 080-23561443, 23561257

Email: aidso.karnataka@yahoo.com

**ಬೆಲೆ : ರೂ. 15/–**

**ಎರಡನೇ ಮುದ್ರಣ : ಮಾರ್ಚ್ 5, 2011**

**ಮುದ್ರಣ :**
ವಿ.ಎನ್.ಪ್ರಿಂಟರ್ಸ್, ನಂ.32/2, 6ನೇ ಅಡ್ಡರಸ್ತೆ,
ಪೈಪ್‌ಲೈನ್, ಮಲ್ಲೇಶ್ವರಂ, ಬೆಂಗಳೂರು–03

# ಮುನ್ನುಡಿ

1974ರ ಜನವರಿ 12–13ರಂದು ಎ.ಐ.ಡಿ.ಎಸ್.ಓ ವತಿಯಿಂದ ಒರಿಸ್ಸಾ ರಾಜ್ಯದ ಕಟಕ್ ನಗರದಲ್ಲಿ ಎರಡನೇ ಅಖಿಲ ಭಾರತ ವಿದ್ಯಾರ್ಥಿ ಸಮ್ಮೇಳನವನ್ನು ಸಂಘಟಿಸಲಾಗಿತ್ತು. ಆ ಸಂದರ್ಭದಲ್ಲಿ ಈ ಯುಗದ ಒಬ್ಬ ಮಾರ್ಕ್ಸ್‌ವಾದಿ ಚಿಂತಕರೂ, ಎಸ್.ಯು.ಸಿ.ಐ.(ಸಿ) ಕಮ್ಯುನಿಸ್ಟ್ ಪಕ್ಷದ ಸಂಸ್ಥಾಪಕರೂ ಆದ, ಕಾರ್ಮಿಕ ವರ್ಗದ ಮಹಾನ್ ನಾಯಕ ಕಾಮ್ರೇಡ್ ಶಿವದಾಸ್ ಘೋಷ್ ಮಾಡಿದ ಭಾಷಣವನ್ನು ಇಲ್ಲಿ ಅನುವಾದಿಸಿ ಪ್ರಕಟಿಸಲಾಗಿದೆ.

ಶೈಕ್ಷಣಿಕ–ಸಾಮಾಜಿಕ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವ ಇಂದಿನ ವಿದ್ಯಾರ್ಥಿಯು ತನ್ನ ಭವಿಷ್ಯದ ಮಾರ್ಗವನ್ನು ಕಳೆದುಕೊಂಡಿದ್ದಾನೆ. ಸಾಮಾಜಿಕ, ಸಾಂಸ್ಕೃತಿಕ ಬಿಕ್ಕಟ್ಟು ಅವನ ಜೀವನವನ್ನು ಮತ್ತಷ್ಟು ಕ್ಲಿಷ್ಟಗೊಳಿಸಿದೆ. ಅಸಂಬದ್ಧವಾದ ಕಾಲ್ಪನಿಕ ಕಥಾವಸ್ತುಗಳಿಂದ, ಅಶ್ಲೀಲತೆ, ಹಿಂಸೆ, ಕ್ರೌರ್ಯಗಳಿಂದ ತುಂಬಿದ ಸಿನಿಮಾಗಳು–ಟಿ.ವಿ.ಕಾರ್ಯಕ್ರಮಗಳು–ಸಾಹಿತ್ಯ ಹಾಗೂ ಮದ್ಯ–ಮಾದಕ ವಸ್ತುಗಳ ಚಟ ಮುಂತಾದವುಗಳಿಗೆ ವಿದ್ಯಾರ್ಥಿಗಳನ್ನು ಬಲಿಮಾಡಿ, ಅವರ ವಿವೇಚನಾ ಶಕ್ತಿ ಹಾಗೂ ಹೋರಾಟದ ಸಾಮರ್ಥ್ಯವನ್ನು ಹರಣಗೊಳಿಸುವ ಪಿತೂರಿ ನಡೆದಿದೆ. ಜಾತಿವಾದಿ, ಪ್ರಾಂತೀಯವಾದಿ, ಮತಾಂಧ, ಪ್ರತಿಗಾಮಿ ಶಕ್ತಿಗಳ ಜೂಜಾಟದಲ್ಲಿ ವಿದ್ಯಾರ್ಥಿಗಳ ಐಕ್ಯತೆಯನ್ನು ಮುರಿಯುವ ಸನ್ನಾಹ ನಡೆದಿದೆ. ಒಂದು ನಿರ್ದಿಷ್ಟವಾದ ವೈಜ್ಞಾನಿಕ ವಿಚಾರಧಾರೆಯ ಆಧಾರದ ಮೇಲೆ ಮಾತ್ರವೇ ಇವೆಲ್ಲವನ್ನೂ ಹೋರಾಡಲು ಸಾಧ್ಯ. ಕಾಮ್ರೇಡ್ ಶಿವದಾಸ್ ಘೋಷ್‌ರವರು ಅಂದು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾಡಿದ ಈ ಭಾಷಣ ಇಂದಿಗೂ ವಿದ್ಯಾರ್ಥಿ ಸಮುದಾಯಕ್ಕೆ ಮಾರ್ಗದರ್ಶನ ನೀಡಬಲ್ಲದು. ಪ್ರಜಾತಾಂತ್ರಿಕ, ವೈಜ್ಞಾನಿಕ, ಧರ್ಮನಿರಪೇಕ್ಷ ಶಿಕ್ಷಣ ಇಂದಿನ ಸಮಾಜದಲ್ಲಿ ಹೇಗೆ ವಿರೂಪಗೊಂಡಿದೆ ಎನ್ನುವ ವಿಷಯವನ್ನು ಹಾಗೂ ವಿದ್ಯಾರ್ಥಿಗಳ ಹೋರಾಟ ಯಾವ ದಿಕ್ಕಿನಲ್ಲಿರಬೇಕು ಎಂಬುದರ ಕುರಿತು ಮತ್ತು ಸಾಮಾಜಿಕ–ಶೈಕ್ಷಣಿಕ ಸಾಂಸ್ಕೃತಿಕ ಚಳುವಳಿಯನ್ನು ಬೆಳೆಸುವಲ್ಲಿ ವಿದ್ಯಾರ್ಥಿಗಳ ಮಹತ್ತರ ಜವಾಬ್ದಾರಿಯನ್ನು ಕುರಿತು ಅವರು ಹೇಳಿದ ವಿಷಯಗಳು ಈ ಹೊತ್ತಿಗೆಯಲ್ಲಿ ಪ್ರಮುಖವಾಗಿವೆ.

ಇದಲ್ಲದೆ ಈ ಪುಸ್ತಕದಲ್ಲಿ ಇನ್ನೊಂದು ಮಹತ್ವದ ಹೊತ್ತಿಗೆಯನ್ನೂ ಸೇರಿಸಲಾಗಿದೆ. ವಿಶ್ವನಾಥ್ ಪ್ರಸಾದ್ ಸಿಂಗ್ ಎಂಬುವರು ಶಿಕ್ಷಣವ್ಯವಸ್ಥೆಯ ಬಗ್ಗೆ ಒಂದು ಪುಸ್ತಕವನ್ನು ಬರೆದು ಅದಕ್ಕೆ ಮುನ್ನುಡಿ ಬರೆದುಕೊಡಲು ಶಿವದಾಸ್ ಘೋಷ್‌ರವರನ್ನು ಕೇಳಿಕೊಂಡರು. ಆ ಸಂದರ್ಭದಲ್ಲಿ ಕಾಮ್ರೇಡ್ ಘೋಷ್‌ರು ಬರೆದುಕೊಟ್ಟ ಲೇಖನವು ನಂತರ 'ನಮ್ಮ ಶೈಕ್ಷಣಿಕ–ಸಾಮಾಜಿಕ ಸಮಸ್ಯೆಗಳಿಗೆ ಒಂದು ವೈಜ್ಞಾನಿಕ ದೃಷ್ಟಿಕೋನ' ಎಂಬ ಹೆಸರಿನಲ್ಲಿ 1969ರಲ್ಲಿ ಪ್ರಕಟವಾಯಿತು. ಇದರ ಅನುವಾದವು ಬಹಳ ಹಿಂದೆಯೇ ಕನ್ನಡದಲ್ಲಿ ಪ್ರಕಟವಾಗಿ ಪ್ರತಿಗಳು ಮುಗಿದು ಹೋಗಿದ್ದವು. ಈ ಕಿರುಹೊತ್ತಿಗೆಯು ನಮ್ಮ ಶಿಕ್ಷಣ ವ್ಯವಸ್ಥೆಯ ಸಮಸ್ಯೆಗಳ

ಕುರಿತು ಹಾಗೂ ಅಲ್ಲಿ ಆಗಬೇಕಾದ ಸುಧಾರಣೆಗಳ ಕುರಿತು ಬಹಳ ಅಮೂಲ್ಯವಾದ ವಿಶ್ಲೇಷಣೆಗಳನ್ನು ಪ್ರತಿಪಾದಿಸಿದೆ.

ಶಿಕ್ಷಣ ಮತ್ತು ವಿದ್ಯಾರ್ಥಿ ಚಳುವಳಿಯ ಸಂಘಟನಾಕಾರರಿಗೆ ಹಾಗೂ ಅಭಿಮಾನಿಗಳಿಗೆ ಎರಡೂ ಹೊತ್ತಿಗೆಗಳೂ ಅವಶ್ಯವಾಗಿದ್ದು ಒಟ್ಟಾಗಿಯೇ ಲಭ್ಯವಿದ್ದರೆ ಅನುಕೂಲ ಎಂಬ ಕಾರಣಕ್ಕಾಗಿ ಇದೀಗ ಒಟ್ಟಾಗಿಯೇ ಮುದ್ರಿಸಿದ್ದೇವೆ.

ಈ ಎಲ್ಲಾ ಕಾರಣಗಳಿಂದ ಎ.ಐ.ಡಿ.ಎಸ್.ಓ ಕರ್ನಾಟಕ ರಾಜ್ಯ ಸಮಿತಿಯು ಇಂಗ್ಲಿಷ್‌ನಲ್ಲಿ ಮೂಲ ಹೊತ್ತಿಗೆಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದೆ. ಅನುವಾದದಲ್ಲಿ ಏನಾದರೂ ತಪ್ಪುಗಳಿದ್ದರೆ ಪ್ರಕಾಶಕರದ್ದೇ ಪೂರ್ಣ ಜವಾಬ್ದಾರಿ.

ದಿನಾಂಕ : ಮಾರ್ಚ್ 5,2011
ಬೆಂಗಳೂರು

**ವಿ.ಎನ್.ರಾಜಶೇಖರ್**
**ಅಧ್ಯಕ್ಷರು, ಎಐಡಿಎಸ್‌ಓ, ಕರ್ನಾಟಕ**
31, 3ನೇ ಅಡ್ಡ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು.

# ಒಳ ಪುಟಗಳಲ್ಲಿ

1. ವಿದ್ಯಾರ್ಥಿ ಹಾಗೂ ಯುವಜನರ
ಮುಂದಿರುವ ಕರ್ತವ್ಯಗಳು – 7–24

2. ನಮ್ಮ ಶೈಕ್ಷಣಿಕ–ಸಾಂಸ್ಕೃತಿಕ ಸಮಸ್ಯೆಗಳಿಗೆ
ಒಂದು ವೈಜ್ಞಾನಿಕ ದೃಷ್ಟಿಕೋನ – 25–32

# ವಿದ್ಯಾರ್ಥಿ ಹಾಗೂ ಯುವಜನರ ಮುಂದಿರುವ ಕರ್ತವ್ಯಗಳು

ಅಧ್ಯಕ್ಷ ಮಂಡಳಿಯ ಸದಸ್ಯರೇ ಹಾಗೂ ಕಾಮ್ರೇಡ್ ಪ್ರತಿನಿಧಿಗಳೇ,

ನಾನು ಇಂಗ್ಲೀಷ್‌ನಲ್ಲಿ, ಅದೇ ಸಮಯದಲ್ಲಿ ಹಿಂದಿಯಲ್ಲಿ ಮಾತನಾಡಬೇಕೆಂದು ಅಂದರೆ ಹಿಂದಿ ಮತ್ತು ಇಂಗ್ಲೀಷ್‌ನ್ನು ವಿಚಿತ್ರ ರೀತಿಯಲ್ಲಿ ಬೆರೆಸಿ ಮಾತನಾಡಬೇಕೆಂದು ಇದೀಗ ನನ್ನನ್ನು ಕೇಳಿಕೊಳ್ಳಲಾಗಿದೆ. ನನಗೆ ಆ ರೀತಿ ಮಾತನಾಡಲು ಬರುವುದಿಲ್ಲ. ಅದು ಏನೇ ಇರಲಿ, ಸಭೆಯ ಗುಣ ವೈಶಿಷ್ಟ್ಯವನ್ನು ಪರಿಗಣಿಸಿ, ನಾನು ಇಂಗ್ಲಿಷ್‌ನಲ್ಲಿ ಮಾತನಾಡುತ್ತೇನೆ.

ಈಗ, ಮೊದಲಿಗೆ, ಎಲ್ಲಾ ಪ್ರತಿನಿಧಿಗಳಿಗೂ ನನ್ನ ಹೃತ್ಪೂರ್ವಕ ಶುಭಾಶಯಗಳು.

ಕಾಮ್ರೇಡರೇ, ನೀವು ದೇಶದ ವಿವಿಧ ಭಾಗಗಳಿಂದ ಬಂದಿದ್ದೀರಿ. ನಮ್ಮ ಜೀವನವನ್ನು ಕಾಡುತ್ತಿರುವ ಇಂದಿನ ಸಮಸ್ಯೆಗಳ ಬಗ್ಗೆ ಸ್ಪಷ್ಟವಾದ ಪರಿಕಲ್ಪನೆಯನ್ನು ಮತ್ತು ತಿಳಿವಳಿಕೆಯನ್ನು ಹೊಂದಿ, ನಿಮ್ಮ ಕಾರ್ಯಕ್ರಮವನ್ನು ಅರ್ಥಾತ್ ಹೋರಾಟ ನೀತಿಯ ಕಾರ್ಯಕ್ರಮವನ್ನು ತೀರ್ಮಾನಿಸಲು ಅಖಿಲ ಭಾರತ ವಿದ್ಯಾರ್ಥಿಗಳ ಸಮ್ಮೇಳನದ ಕಾರ್ಯಕಲಾಪಗಳಲ್ಲಿ ಸಕ್ರಿಯ ಪಾತ್ರವಹಿಸಲು ನಿಮ್ಮಲ್ಲಿ ಅನೇಕ ಮಂದಿ ಬಹುದೂರದ ಪ್ರಯಾಣ ನಡೆಸಿ ಮತ್ತು ಬಹಳಷ್ಟು ತೊಂದರೆಗಳನ್ನು ಸಹಿಸಿ ಇಲ್ಲಿಗೆ ಬಂದಿದ್ದೀರಿ. ಹಾಗೆಯೇ, ಇಷ್ಟು ಸ್ವಲ್ಪ ಸಮಯದಲ್ಲಿಯೇ ಇಂತಹ ಬೃಹತ್ ಸಮ್ಮೇಳನಕ್ಕೆ ಒಳ್ಳೆಯ ವ್ಯವಸ್ಥೆಯನ್ನು ಮಾಡಿದ್ದಕ್ಕಾಗಿ ಮತ್ತು ಸಮ್ಮೇಳನಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಹು ಸುಲಭವಾಗಿ ನಿವಾರಿಸಿದ್ದಕ್ಕಾಗಿ, ಆಲ್ ಇಂಡಿಯಾ ಡಿ.ಎಸ್.ಓ ಸಮ್ಮೇಳನದ ನಾಯಕರನ್ನು ಮತ್ತು ಸಂಘಟನಾಕಾರರನ್ನು, ವಿಶಿಷ್ಟವಾಗಿ ಒರಿಸ್ಸಾ ರಾಜ್ಯದ ಡಿ.ಎಸ್.ಓ ಕಾರ್ಯಕರ್ತರನ್ನು ನಾನು ಅಭಿನಂದಿಸುತ್ತೇನೆ.

ಕಾಮ್ರೇಡರೇ, ನಮ್ಮ ದೇಶವು ರಾಜಕೀಯ, ಆರ್ಥಿಕ, ಸಾಮಾಜಿಕ, ಎಲ್ಲಕ್ಕೂ ಮಿಗಿಲಾಗಿ ಸಮಾಜದ ಸಾಂಸ್ಕೃತಿಕ ಹಾಗೂ ನೈತಿಕ ಕ್ಷೇತ್ರದ ಆಗುಹೋಗುಗಳಲ್ಲಿ ಒಂದು ಅತ್ಯಂತ ವಿಷಮ ಪರಿಸ್ಥಿತಿಯನ್ನು ಎದುರಿಸುತ್ತಿರುವಾಗ ಆಲ್ ಇಂಡಿಯಾ ಡಿ.ಎಸ್.ಓ ಸಂಘಟಿಸಿರುವ ಅಖಿಲ ಭಾರತ ವಿದ್ಯಾರ್ಥಿಗಳ ಸಮ್ಮೇಳನ ನಡೆಯುತ್ತಿದೆ. ನಮ್ಮ ಸಮಾಜದಲ್ಲಿ ನೀತಿ ಮತ್ತು ನೈತಿಕ ಮಟ್ಟ ಸತತ ಅಧಃಪತನಕ್ಕೊಳಗಾಗಿದೆ ಎಂಬುದನ್ನು ಅತ್ಯಂತ ನೋವು ಹಾಗೂ ಆತಂಕದಿಂದ ನೀವೆಲ್ಲ ಗಮನಿಸಿದ್ದೀರಿ ಹಾಗೂ ಎಲ್ಲಾ ವಿಚಾರವಂತ ಜನರೂ ಗಮನಿಸುತ್ತಿದ್ದಾರೆಂದು ನಾನು ಭಾವಿಸಿದ್ದೇನೆ. ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಮಟ್ಟದ

ಬಗ್ಗೆ ಅಥವಾ ನೀತಿ–ನೈತಿಕತೆಯ ಯಾವುದೇ ರೀತಿರಿವಾಜಿನ ಬಗ್ಗೆ ಗಮನಹರಿಸದಿರುವ ಪ್ರವೃತ್ತಿಯು ಯಾವುದೋ ಒಂದು ಪಂಗಡದ ಅಥವಾ ಗುಂಪಿನ ಪ್ರತ್ಯೇಕವಾದ ವರ್ತನೆಯಾಗಿಲ್ಲ. ಇಂದು ನೀತಿಭ್ರಷ್ಟತೆ ಎಂತಹ ಆಯಾಮ ಪಡೆದಿದೆ, ಎಂತಹ ನಗ್ನ ರೂಪ ತಾಳಿದೆ ಎಂದರೆ ಬಹಳಷ್ಟು ಜನರಿಗೆ ಅದು ಒಂದು ಜೈವಿಕ ಸಹಜ ಕ್ರಿಯೆ ಎಂದೆನಿಸಬಹುದು. ನಿಜಕ್ಕೂ, ಹೆಸರಿಗೆ ಮಾತ್ರ ವೈಜ್ಞಾನಿಕ ಸಂಶೋಧನಾ ಕಾರ್ಯದಲ್ಲಿ ತೊಡಗಿರುವ ಕೆಲವು ಅನುಭವವಾದಿಗಳು (Empiricists) ಹೆಚ್ಚು ಕಡಿಮೆ ಇದೇ ರೀತಿಯ ತೀರ್ಮಾನಕ್ಕೆ ಬಂದಿದ್ದಾರೆ. ಇಂದು ಭಾರತದಲ್ಲಿ ಯಾವುದೇ ರೀತಿಯ ಮೌಲ್ಯಗಳ ಬಗ್ಗೆ ಯಾವ ಕಾಳಜಿಯೂ ಇಲ್ಲದಿರುವಂತಹ ಜೈವಿಕ ಸಹಜತೆ ಹೊಂದಿರುವ ಜನಾಂಗವೊಂದು ವಾಸಿಸುತ್ತಿದೆಯೇನೋ ಎಂಬಂತೆ. ತನ್ಮೂಲಕ ಅವರು ಹೇಳಬಯಸುವುದೇನೆಂದರೆ ನಮ್ಮ ಜನತೆಯಲ್ಲಿ ಕೆಲವು ಜೈವಿಕ ಅಂತರ್ಗತ ಅಂಶಗಳು ಮನೆಮಾಡಿಕೊಂಡಿವೆಯಾದ್ದರಿಂದ ಇಂತಹ ಕಾಳಜಿಯನ್ನು ವಹಿಸಲು ಅವರು ಮೂಲಭೂತವಾಗಿ ಅಸಮರ್ಥರಾಗಿದ್ದಾರೆ ಎಂದು. ಈ ರೀತಿಯ ತೀರ್ಮಾನಕ್ಕೆ ಬರುವುದು ಅವೈಜ್ಞಾನಿಕವೂ ಮತ್ತು ಅನೈತಿಹಾಸಿಕವೂ ಮಾತ್ರವಲ್ಲದೆ ಅಸಂಬದ್ಧ ಪ್ರಲಾಪವಾಗಿದೆ. ಅದೇನೇ ಇರಲಿ, ಇಂದು ಪ್ರತಿಯೊಬ್ಬ ಪ್ರಾಮಾಣಿಕ ವ್ಯಕ್ತಿಯ ಮನಸ್ಸನ್ನು ಕಾಡುತ್ತಿರುವ ಪ್ರಶ್ನೆ ಎಂದರೆ – ಏಕೆ ಈ ಉಸಿರುಗಟ್ಟಿಸುವಂತಹ ಪರಿಸ್ಥಿತಿ? ಏಕೆ ಇಂತಹ ಅಸಹನೀಯ ವಿದ್ಯಮಾನ, ಹೃದಯವಿದ್ರಾವಕ ವಿದ್ಯಮಾನ ನಮ್ಮ ಸಮಾಜದಲ್ಲಿ ಉಂಟಾಗಿದೆ? ನೀವು ಸಮಸ್ಯೆಯ ಆಳಕ್ಕಿಳಿದು ಪರಿಶೋಧಿಸಬೇಕು. ಏಕೆಂದರೆ, ಇದು ಅತ್ಯಂತ ಮುಖ್ಯ ಪ್ರಶ್ನೆ ಎಂದು ನಾನು ಭಾವಿಸುತ್ತೇನೆ. ಇದು ಎಂತಹ ಮುಖ್ಯ ಪ್ರಶ್ನೆ ಎಂದರೆ ಇದನ್ನು ಸೂಕ್ತವಾಗಿ ನಿರ್ವಹಿಸಲಾಗದಿದ್ದರೆ, ಸರಿಯಾಗಿ ಅರ್ಥಮಾಡಿಕೊಳ್ಳಲಾಗದಿದ್ದರೆ, ಸರಿಯಾದ ಉತ್ತರವನ್ನು ಹುಡುಕಲಾಗದಿದ್ದರೆ ನಮ್ಮ ದೇಶದಲ್ಲಿನ ರಾಜಕೀಯ ಹೋರಾಟಗಳನ್ನು ಅದರ ತಾರ್ಕಿಕ ಅಂತ್ಯಕ್ಕೆ ಸರಿಯಾಗಿ ಮುನ್ನಡೆಸಲಾಗುತ್ತದೆಯೇ, ನಮಗೆ ಅವನ್ನು ಪರಿಹರಿಸಲಾಗುತ್ತದೆಯೇ, ನಮ್ಮ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ರಚನೆಯಲ್ಲಿ ಮೂಲಭೂತ ಬದಲಾವಣೆಯನ್ನು ತರಲು ಮತ್ತು ತನ್ಮೂಲಕ ನಮ್ಮ ದೇಶದ ಜ್ವಲಂತ ಆರ್ಥಿಕ ಮತ್ತಿತರ ಸಮಸ್ಯೆಗಳನ್ನು ಪರಿಹರಿಸಲು ಸಕ್ರಿಯ ಕ್ರಮಗಳನ್ನು, ಮೂರ್ತವಾದ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವೇ ಎಂಬ ಪ್ರಶ್ನೆ ನನ್ನನ್ನು ಕಾಡುತ್ತದೆ. ಏಕೆಂದರೆ, ನಿಮಗೆ ತಿಳಿದಿರುವಂತೆ, ರಾಜಕೀಯ, ಆರ್ಥಿಕ ಮತ್ತು ಎಲ್ಲಾ ಸಾಮಾಜಿಕ ಸಮಸ್ಯೆಗಳು ಕೆಲವೊಂದು ಪ್ರಶ್ನೆಗಳೊಂದಿಗೆ, ಕೆಲವೊಂದು ಅತಿಮಹತ್ವದ ಪ್ರಶ್ನೆಗಳೊಂದಿಗೆ ಯಾವಾಗಲೂ ನಿಕಟ ಸಂಬಂಧವನ್ನು ಹೊಂದಿರುತ್ತವೆ; ಅವುಗಳನ್ನು ಪರಿಹರಿಸದೆ ಈ ಸಮಸ್ಯೆಗಳ ಯಾವ ಅಂಶವನ್ನೂ ಸಹ ನೀವು ಪರಿಹರಿಸಲಾಗುವುದಿಲ್ಲ. ಈ ಪ್ರಶ್ನೆಗಳು ದೇಶದ ಅಧಿಕಾರ ವ್ಯವಸ್ಥೆ, ರಾಜಕೀಯ–

ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗೆ ಸಂಬಂಧಪಟ್ಟಿರುವಂತಹವು. ಇವೆಲ್ಲವೂ ರಾಜ್ಯದ ವರ್ಗಲಕ್ಷಣಕ್ಕೆ ಮತ್ತು ನಮ್ಮ ಆರ್ಥಿಕ ವ್ಯವಸ್ಥೆಗೆ ಅಂದರೆ ಯಾವುದನ್ನು ನಾವು ಬಂಡವಾಳವಾದ, ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಎಂದು ಕರೆಯುತ್ತೇವೆಯೋ ಅದರ ನಿರ್ದಿಷ್ಟ ಮತ್ತು ವಿಶಿಷ್ಟ ಲಕ್ಷಣಕ್ಕೆ ಸಂಬಂಧಪಟ್ಟಿರುವಂತಹವು. ನಮ್ಮ ಜೀವನವನ್ನು ಕಾಡುತ್ತಿರುವ ಎಲ್ಲವೂ, ಪ್ರತಿಯೊಂದು ಸಾಮಾಜಿಕ ವ್ಯಾಧಿಯೂ ಈ ವಾಸ್ತವಿಕ ತಳಹದಿಯಿಂದ, ಮೇಲೆ ಹೇಳಿದ ಈ ಎರಡು ಮುಖ್ಯ ಅಂಶಗಳಿಂದ ಹುಟ್ಟಿಕೊಳ್ಳುತ್ತಿದೆ. ಮತ್ತೆ ಇವೆರಡರಲ್ಲೂ ಬಂಡವಾಳಶಾಹಿ ರಾಜ್ಯವೇ ಅತ್ಯಂತ ಮುಖ್ಯವಾದದ್ದು. ಭಾರತೀಯ ಜನತೆಯ ಹಿತಾಸಕ್ತಿಗೆ ಧಕ್ಕೆಯನ್ನುಂಟುಮಾಡುವಂತೆ, ಮಾತ್ರವಲ್ಲದೆ ಇಲ್ಲಿ ಬದುಕುತ್ತಿರುವ ಮಿಲಿಯಾಂತರ ಜನತೆಯ ಜೀವಕ್ಕೆ ಸಂಚಕಾರ ತರುವಂತೆ ಶೋಷಕ ಬೂರ್ಜ್ವಾ ವರ್ಗದ ನಿಯಂತ್ರಣದಲ್ಲಿರುವ ರಾಜ್ಯವು ಪ್ರಸಕ್ತ ಬಂಡವಾಳಶಾಹಿ ವ್ಯವಸ್ಥೆಯನ್ನು ಭದ್ರಪಡಿಸಿಕೊಳ್ಳುವ ಹಾಗೂ ಮತ್ತಷ್ಟು ಬಲಪಡಿಸಿಕೊಳ್ಳುವ ದೃಷ್ಟಿಯನ್ನು ಹೊಂದಿದೆ; ತಮ್ಮ ಕುಟಿಲ ವರ್ಗಯೋಜನೆಗಳ, ವರ್ಗ ಉದ್ದೇಶಗಳ ಹಾಗೂ ವರ್ಗ ಶೋಷಣೆಗಳ ಮುಂದುವರಿಕೆಗಾಗಿ ಅವರು ಹಿಡಿತದಲ್ಲಿಟ್ಟುಕೊಂಡಿರುವ ರಾಜ್ಯವೇ ಈ ಬಂಡವಾಳಶಾಹಿ ರಾಜ್ಯವಾಗಿದೆ. ಆದ್ದರಿಂದ ಕಾಮ್ರೇಡರೇ, ಆಳುವ ಬೂರ್ಜ್ವಾ ವರ್ಗ ಮತ್ತದರ ಪಕ್ಷಗಳ ಆಡಂಬರದ ಮಾತುಗಳು ಏನೇ ಇರಲಿ, ವಾಸ್ತವವಾಗಿ ಅವರಿಗೆ ಜನತೆಯ ಬಗ್ಗೆ ಯಾವುದೇ ಕಾಳಜಿಯಿಲ್ಲ ಎಂಬುದನ್ನು ನೀವು ಯಾವಾಗಲೂ ನೆನಪಿನಲ್ಲಿಡಬೇಕು. ಅವರು ರಾಷ್ಟ್ರ ಮತ್ತು ರಾಷ್ಟ್ರೀಯ ಹಿತಾಸಕ್ತಿಯ ಬಗ್ಗೆ ಮಾತನಾಡುವಾಗ ಸಹ ಅವರ ಏಕೈಕ ಉದ್ದೇಶವಿರುವುದು ಜನತೆಯ ದೇಶಪ್ರೇಮದ ಭಾವನೆಯನ್ನು ತಮ್ಮ ಬೂರ್ಜ್ವಾ ವರ್ಗದ ಉದ್ದೇಶದ ಮುಂದುವರಿಕೆಗಾಗಿ ಉಪಯೋಗಿಸಿಕೊಳ್ಳುವುದು ಮಾತ್ರ. ಆದ್ದರಿಂದ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಸ್ವಲ್ಪ ಮಟ್ಟಿಗೆ ಪ್ರಗತಿಶೀಲ ಗುಣವನ್ನು ಹೊಂದಿದ್ದ ಮತ್ತು ಅಷ್ಟರಮಟ್ಟಿಗೆ ಜನತೆಯ ಹಿತಾಸಕ್ತಿಯನ್ನು ಪೂರೈಸಿದ ರಾಷ್ಟ್ರೀಯವಾದ ಈಗ ಜನತೆಯ ಗಮನವನ್ನು ನೈಜ ಸಮಸ್ಯೆಯಿಂದ ಸುಳ್ಳು ಸಮಸ್ಯೆಯೆಡೆಗೆ ಸೆಳೆಯಲೋಸುಗ, ಜನತೆಯನ್ನು ಮೋಸಗೊಳಿಸಲು ಮತ್ತು ಅವರ ಕಣ್ಣಿಗೆ ಮಣ್ಣೆರೆಚಲು ಆಳುವ ಬಂಡವಾಳಶಾಹಿ ವರ್ಗದ ಕೈಯಲ್ಲಿ ಒಂದು ಸಾಧನವಾಗಿದೆ ಮತ್ತು ಸವಲತ್ತಾಗಿದೆ. ಪದೇ ಪದೇ ಆಳುವ ಬೂರ್ಜ್ವಾ ವರ್ಗ, ಬೂರ್ಜ್ವಾ ಮತ್ತು ಪೆಟ್ಟಿಬೂರ್ಜ್ವಾ ಪಕ್ಷಗಳು ಜನತೆಯನ್ನು ಕ್ರಾಂತಿಕಾರಿ ಹೋರಾಟಗಳ ಮುಖ್ಯ ಪ್ರವಾಹದಿಂದ ದೂರವಿಡಲು ಈ ಕುಟಿಲ ಅಸ್ತ್ರವನ್ನು ಉಪಯೋಗಿಸುತ್ತವೆ. ಬೂರ್ಜ್ವಾ ಮತ್ತು ಪೆಟ್ಟಿಬೂರ್ಜ್ವಾ ಪಕ್ಷಗಳ ಈ ಸಂಚಿನಿಂದ ಮೋಸಹೋಗದಿರುವಂತೆ ಜನತೆಗೆ ಶಿಕ್ಷಣ ನೀಡಬೇಕಾಗಿರುವುದು ಪರಮೋಚ್ಚ ಪ್ರಾಮುಖ್ಯತೆಯನ್ನು ಹೊಂದಿದೆ. ಈ ಧೋರಣೆಯನ್ನು ಸರಿಯಾಗಿ ಗ್ರಹಿಸಲು, ನಮ್ಮದು ವರ್ಗವಿಭಜಿತ ಸಮಾಜ ಎಂಬುದನ್ನು ನೀವು ಯಾವಾಗಲೂ

ಮನಸ್ಸಿನಲ್ಲಿಟ್ಟುಕೊಂಡಿರಬೇಕು. ನಮ್ಮ ರಾಷ್ಟ್ರ ಅವಿಭಾಜ್ಯವಾದುದೇನಲ್ಲ. ನಮ್ಮ ಇಚ್ಛೆ ಅನಿಚ್ಛೆಗಳೇನೇ ಇರಲಿ ನಾವು ಪ್ರಜ್ಞಾವಂತರಾಗಿದ್ದರೆ, ನಮ್ಮ ಸಮಾಜವೂ ಸಹ ಒಂದು ವರ್ಗವಿಭಜಿತ ಸಮಾಜ ಎಂಬ ನಿಚ್ಚಳ ಸತ್ಯವನ್ನು ನಾವು ಉಪೇಕ್ಷಿಸಲು ಸಾಧ್ಯವಿಲ್ಲ.

ಕಾಮ್ರೇಡರೇ, ಇತಿಹಾಸದಲ್ಲಿ ಉತ್ಪಾದನೆಯ ಬೆಳವಣಿಗೆಯ ಒಂದು ನಿರ್ದಿಷ್ಟ ಹಂತದಲ್ಲಿ ವಿರೋಧಾತ್ಮಕ ವರ್ಗಗಳು ಮತ್ತು ವರ್ಗಹೋರಾಟಗಳು ಸಮಾಜದಲ್ಲಿ ಕಾಣಿಸಿಕೊಂಡವು; ಆಗಿನಿಂದಲೂ ನಮ್ಮ ಇಚ್ಛೆಗೆ ಸ್ವತಂತ್ರವಾಗಿಯೋ ಎಂಬಂತೆ ವರ್ಗಗಳು ಹಾಗೂ ವರ್ಗ ಹೋರಾಟಗಳು ಅಸ್ತಿತ್ವದಲ್ಲಿವೆ, ಅದೇ ರೀತಿ ಮುಂದುವರಿಯುತ್ತಿವೆ ಮತ್ತು ಮಾನವ ಸಮಾಜದ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ವರ್ಗಹೋರಾಟ ಸನ್ನೆಗೋಲಿನಂತೆ ಕೆಲಸ ಮಾಡುತ್ತಿದೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಬೇಕು. ವರ್ಗಹೋರಾಟದ ಬೆಳವಣಿಗೆಯ ಗತಿಯಲ್ಲಿ, ಎಲ್ಲಿಯವರೆಗೂ ವರ್ಗಗಳು, ವರ್ಗ ಶೋಷಣೆ, ವರ್ಗಹೋರಾಟಗಳು ಮತ್ತು ವರ್ಗದೌರ್ಜನ್ಯ–ದಬ್ಬಾಳಿಕೆಯ ಅಸ್ತ್ರವಾದ ರಾಜ್ಯವು ಮಾನವ ಸಮಾಜದ ಬೆಳವಣಿಗೆಯ ಕ್ಷೇತ್ರದಿಂದ ಕಣ್ಮರೆಯಾಗುವುದಿಲ್ಲವೋ ಅಲ್ಲಿಯವರೆಗೂ ಸಮಾಜ, ತೀವ್ರ ವರ್ಗ ಸಮರದ ಅಂಕಣವಾಗಿಯೆ ಉಳಿಯುತ್ತದೆ. ಆದ್ದರಿಂದ ರಾಷ್ಟ್ರೀಯ ಹಿತಾಸಕ್ತಿ, ರಾಷ್ಟ್ರೀಯ ಏಕತೆ, ಶಿಕ್ಷಣ ಮತ್ತು ಶೈಕ್ಷಣಿಕ ಸುಧಾರಣೆಗಳಿಗೆ ಸಂಬಂಧಿಸಿದಂತೆ ಏಕೈಕ ಧೋರಣೆ ಇರಲು ಸಾಧ್ಯವಿಲ್ಲ. ಈ ಸಮಸ್ಯೆಗಳ ಕುರಿತಾದ ಯಾವುದೇ ಧೋರಣೆ ಪ್ರಗತಿಗಾಮಿಯಾಗಿದೆಯೋ ಅಥವಾ ಪ್ರತಿಗಾಮಿಯಾಗಿದೆಯೋ, ಬಂಡವಾಳಶಾಹಿ ವರ್ಗದ ಹಿತಾಸಕ್ತಿಯನ್ನು ಬಹಿರಂಗವಾಗಿ ಅಥವಾ ಗುಟ್ಟಾಗಿ ಪೂರೈಸುತ್ತಿದೆಯೋ ಅಥವಾ ದುಡಿಯುವ ಜನರ ಮತ್ತು ಅವರ ಕ್ರಾಂತಿಕಾರಿ ಹೋರಾಟಗಳ ಹಿತಾಸಕ್ತಿಯನ್ನು ಪೂರೈಸುತ್ತಿದೆಯೋ ಎಂಬುದನ್ನು ವರ್ಗ ಹೋರಾಟ ಮತ್ತು ವರ್ಗ ರಾಜಕೀಯ ದೃಷ್ಟಿಕೋನದ ಒರೆಗಲ್ಲಿನ ಮೇಲೆ ತೀರ್ಮಾನಿಸಬೇಕು. ಹೋರಾಟದ ಸರಿಯಾದ ಧೋರಣೆ ಮತ್ತು ಕಾರ್ಯಕ್ರಮವನ್ನು ಕಂಡುಹಿಡಿಯುವ ಇನ್ನಿತರ ಎಲ್ಲಾ ಮಾರ್ಗಗಳು ವಂಚನಾಯುಕ್ತವಷ್ಟೇ ಅಲ್ಲದೆ ಅಪಾಯಕಾರಿ ಸಹ. ಕ್ರಾಂತಿಯ ಬಗ್ಗೆ ಮಾತನಾಡತಕ್ಕಂಥ ಪ್ರಾಮಾಣಿಕವಾಗಿ ಯೋಚಿಸುವ ಎಲ್ಲಾ ಜನರು ಈ ಪ್ರಶ್ನೆಯನ್ನು ಅರ್ಥಮಾಡಿಕೊಳ್ಳಬೇಕು. ಏಕೆಂದರೆ ಸಾಮಾಜಿಕ ಪರಿವರ್ತನೆಯನ್ನು ತರುವಲ್ಲಿ, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ರಚನೆಯಲ್ಲಿ ಮೂಲಭೂತ ಬದಲಾವಣೆಯನ್ನು ತರುವಲ್ಲಿ ನಿಜವಾಗಿಯೂ ಆಸಕ್ತರಾಗಿದ್ದರೆ, ಅವರು ನಿಯಮಗಳನ್ನು ಅಂದರೆ ವರ್ಗ ಹೋರಾಟದ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸುತ್ತಿರುವ ಆ ನಿಯಮಗಳನ್ನು ಅರಿತುಕೊಳ್ಳಬೇಕು. ಇದನ್ನು ಅರಿತುಕೊಳ್ಳುವವರೆಗೆ ನಾವು ಸಮಾಜದ ಬೆಳವಣಿಗೆಯ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಸಾಧ್ಯವಿಲ್ಲ. ನಾವು ಸಾಮಾಜಿಕ ಬದಲಾವಣೆ ಮತ್ತು ಕ್ರಾಂತಿಯ ಬಗ್ಗೆ ಕನಸನ್ನು ಕಾಣಬಹುದು.

ಆದರೆ ಆ ಪ್ರಕ್ರಿಯೆಯ ಮೇಲೆ ಯಾವುದೇ ಪ್ರಭಾವವನ್ನು ಬೀರಲು ಸಾಧ್ಯವಾಗುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ ನಮ್ಮಲ್ಲಿ ಸಮರ್ಪಣಾ ಮನೋಭಾವ ಮತ್ತು ಶ್ರದ್ಧೆಯಿದ್ದರೂ ಸಹ ನಮ್ಮ ಎಲ್ಲಾ ಸಿದ್ಧಾಂತಗಳು ಬರಡಾಗುತ್ತವೆ ಮತ್ತು ನಮ್ಮ ಕ್ರಿಯೆ ಕುರುಡಾಗಿರುತ್ತದೆ. ನಾನು ಈ ಮಾತನ್ನು ನಂಬಿದ್ದೇನೆ ಮತ್ತು ಇದನ್ನೇ ಹೇಳಲಿಚ್ಛಿಸುತ್ತೇನೆ. ಆದ್ದರಿಂದ ಒಂದು ವರ್ಗವಿಭಜಿತ ಸಮಾಜದಲ್ಲಿ ಬದುಕುತ್ತಿರುವ ಯಾರೇ ಆಗಲಿ ರಾಷ್ಟ್ರ, ರಾಷ್ಟ್ರದ ಹಿತಾಸಕ್ತಿ, ಸಾಮಾಜಿಕ ಅಭಿವೃದ್ಧಿ, ಸಾಮಾಜಿಕ ಹಿತಾಸಕ್ತಿ, ಶೈಕ್ಷಣಿಕ ಸುಧಾರಣೆ ಇತ್ಯಾದಿಗಳ ಬಗ್ಗೆ ವರ್ಗ ಮತ್ತು ವರ್ಗ ಹಿತಾಸಕ್ತಿಯ ಬಗ್ಗೆ ವಿಶೇಷವಾಗಿ ಒತ್ತುಕೊಡದೆ ಮಾತನಾಡಿದರೆ ಅವರು ಒಂದೋ ಅಜ್ಞಾನಿಗಳಾಗಿರಬೇಕು ಅಥವಾ ಇನ್ನೇನು ತಾನೇ ಹೇಳಲಿ – ಅವರು ಆಷಾಢಭೂತಿಗಳಾಗಿರಬೇಕು. ಅವರು ಒಂದೋ ಅಜ್ಞಾನಿಗಳು, ಅಮಾಯಕರು, ಒಣ ಪಂಡಿತರು (Philistines) ಇಲ್ಲವೇ ಅವರು ಆಷಾಢಭೂತಿಗಳು. ಈ ವಿಷಯದಲ್ಲಿ ಸಿ.ಪಿ.ಐ ಮತ್ತು ಸಿ.ಪಿ.ಐ(ಎಂ)ನ ಉದಾಹರಣೆಯನ್ನು ತೆಗೆದುಕೊಳ್ಳಿ. ಈ ಎರಡೂ ಪಕ್ಷಗಳು ಇನ್ನೂ ತಾವು ಮಾರ್ಕ್ಸ್‌ವಾದಿ–ಲೆನಿನ್‌ವಾದಿಗಳೆಂದು ಘೋಷಿಸಿಕೊಳ್ಳುತ್ತವೆ. ಈ ಪಕ್ಷಗಳು ಮತ್ತು ಇವುಗಳ ವಿದ್ಯಾರ್ಥಿ ಸಂಘಟನೆಗಳಾದ ಎ.ಐ.ಎಸ್.ಎಫ್ ಮತ್ತು ಎಸ್.ಎಫ್.ಐ.ಗಳು ಆಳುವ ಬಂಡವಾಳಶಾಹಿ ವರ್ಗದ ರಾಗಕ್ಕೆ ತಾಳ ಹಾಕುತ್ತಾ ವೃತ್ತಿಪರ ಅಥವಾ ಉದ್ಯೋಗಪರ ಅಥವಾ ಉತ್ಪಾದನಾಪರ ಶಿಕ್ಷಣದ ಪರವಾಗಿ ವಾದಿಸುತ್ತಿವೆ. ಆಳುವ ಬಂಡವಾಳಶಾಹಿ ವರ್ಗವು ನಮ್ಮ ವಿದ್ಯಾರ್ಥಿಗಳಿಗೆ ನೈಜ ಪ್ರಜಾತಾಂತ್ರಿಕ, ವೈಜ್ಞಾನಿಕ ಮತ್ತು ಧರ್ಮನಿರಪೇಕ್ಷ ಶಿಕ್ಷಣವನ್ನು ನೀಡುವ ಬದಲಿಗೆ ಉತ್ಪಾದನೆಗೆ ಇಂಬುಕೊಡುವ ನೆಪದಲ್ಲಿ ಕೇವಲ ಸುದ್ದಿಸಂಗ್ರಹ ಮತ್ತು ತಾಂತ್ರಿಕ ತರಬೇತಿಯತ್ತ ತಿರುಗಿಸಿ, ಇಡಿಯ ವಿದ್ಯಾಭ್ಯಾಸ ಪದ್ಧತಿಯನ್ನೇ ವೃತ್ತಿಪರ ಅಥವಾ ಉದ್ಯೋಗಪರ ಶಿಕ್ಷಣದ ಆಧಾರದ ಮೇಲೆ ರಚಿಸುತ್ತಿದೆ ಎಂಬ ಸತ್ಯ–ಯಾವ ಸತ್ಯ ಅವರು ನಿಜಕ್ಕೂ ಮಾರ್ಕ್ಸ್‌ವಾದಿ–ಲೆನಿನ್‌ವಾದಿಗಳಾಗಿದ್ದರೆ ಅರ್ಥವಾಗಬೇಕಿತ್ತೋ–ಅವರಿಗೆ ಅರ್ಥವಾಗುವುದಿಲ್ಲವೇ? ಶೈಕ್ಷಣಿಕ ಸುಧಾರಣೆಗಳನ್ನು ತರುವ ಹೆಸರಿನಲ್ಲಿ ಇಂತಹ ಸಂಚನ್ನು ಆಳುವ ಬಂಡವಾಳಶಾಹಿವರ್ಗ ಮತ್ತದರ ಪಕ್ಷಗಳು ಏಕೆ ಪ್ರತಿಪಾದಿಸುತ್ತಿವೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಕಷ್ಟವೇನಲ್ಲ; ಆದರೆ, ಮಾರ್ಕ್ಸ್‌ವಾದಿ–ಲೆನಿನ್‌ವಾದಿಗಳೆಂದು ಹೇಳಿಕೊಳ್ಳುವ ಸಿ.ಪಿ.ಐ, ಸಿ.ಪಿ.ಐ(ಎಂ)ನಂತಹ ಪಕ್ಷಗಳು ಇಂತಹ ದುಷ್ಟ ಸಂಚಿಗೆ ಬೆಂಬಲ ನೀಡಲು ಹೇಗೆ ಸಾಧ್ಯ ಮತ್ತು ಶೈಕ್ಷಣಿಕ ಸುಧಾರಣೆಗಳ ಕ್ಷೇತ್ರದಲ್ಲಿ ಈ ವಿಷಯದ ಬಗ್ಗೆ ಹೆಚ್ಚು ಕಡಿಮೆ ಆಳುವ ಬಂಡವಾಳಶಾಹಿಗಳ ಧಾಟಿಯಲ್ಲೇ ಮಾತನಾಡಲು ಹೇಗೆ ಸಾಧ್ಯ ಎಂಬುದನ್ನು ಅರಿಯಲು ನಾನು ವಿಫಲನಾಗಿದ್ದೇನೆ. ಇಂತಹ ಪರಿಸ್ಥಿತಿಯಲ್ಲಿ ನಾನು ಈ ಜನರನ್ನು ಏನೆಂದು ಕರೆಯಲಿ–ಅಜ್ಞಾನಿಗಳೆಂದೇ, ಅಮಾಯಕರೆಂದೇ ಅಥವಾ ಆಷಾಢಭೂತಿಗಳೆಂದೇ?

ವರ್ಗ ಮತ್ತು ವರ್ಗ ಹಿತಾಸಕ್ತಿಯ ಬಗ್ಗೆ ಉಲ್ಲೇಖ ಮಾಡದೆ ಹಾಗೂ ಸಮಾಜದಲ್ಲಿ ಸತತವಾಗಿ ನಡೆಯುತ್ತಲೇ ಇರುವ ವರ್ಗ ಹೋರಾಟದೊಂದಿಗೆ ಈ ಪ್ರಶ್ನೆಗಳನ್ನು ಹೇಗೆ ಸಂಬಂಧಿಸಬೇಕೆಂಬುದನ್ನು ತಿಳಿಯದೆ ಎಷ್ಟೋಬಾರಿ ಜನತೆ ಮತ್ತು ನಿಮ್ಮಲ್ಲಿ ಅನೇಕರೂ ಸಹ ಇಂತಹ ವಿಷಯಗಳ ಬಗ್ಗೆ ಸಾಮಾನ್ಯ ಪರಿಭಾಷೆಯಲ್ಲೇ ಮಾತನಾಡಿಬಿಡುತ್ತಾರೆ ಎಂಬುದು ನನಗೆ ತಿಳಿದಿದೆ. ಇದನ್ನು ನೀವು ಪ್ರಜ್ಞಾಪೂರ್ವಕವಾಗಿ ಮಾಡುತ್ತಿದ್ದೀರೋ ಇಲ್ಲವೋ ಎಂಬುದು ಅಷ್ಟು ಮುಖ್ಯವಲ್ಲ. ನಿಮ್ಮ ಬದುಕು ಮತ್ತು ಚಿಂತನೆಯ ಮೇಲೆ ನೇರವಾದ ಪರಿಣಾಮವನ್ನೂ ಅಪಾರವಾದ ಪ್ರಭಾವವನ್ನೂ ಬೀರುವ, ಅಸ್ತಿತ್ವದಲ್ಲಿರುವ ವರ್ಗ ಹೋರಾಟದ ಬಗ್ಗೆ ನೀವು ಅರಿಯದಿರಬಹುದು. ನೀವು ಪ್ರಾಮಾಣಿಕರಾಗಿದ್ದರೂ, ಸಮರ್ಪಣಾ ಮನೋಭಾವವನ್ನು ಹೊಂದಿದ್ದರೂ ಈ ಪ್ರಶ್ನೆಗಳನ್ನು ಅಸ್ತಿತ್ವದಲ್ಲಿರುವ ವರ್ಗಹೋರಾಟ ಮತ್ತು ವರ್ಗಹಿತಾಸಕ್ತಿಯೊಂದಿಗೆ ಸಂಬಂಧಿಸಿ ನೋಡಲು ಸಾಧ್ಯವಾಗದಿದ್ದರೆ, ನೀವು ನಿಶ್ಚಿತವಾಗಿಯೂ ತಪ್ಪುಗಳನ್ನು ಮಾಡುತ್ತೀರಿ. ಪ್ರಾಮಾಣಿಕತೆ ಮತ್ತು ಶ್ರದ್ಧೆ ಪೂರ್ವಾವಶ್ಯಕತೆಗಳು; ಕೇವಲ ಆರಂಭದ ಹಂತ. ಈ ಗುಣಗಳಿಲ್ಲದೆ ಏನೂ ಮಾಡಲು ಸಾಧ್ಯವಿಲ್ಲ. ಏಕೆಂದರೆ ಒಂದು ಒಳ್ಳೆಯ ಮಾರ್ಗ, ಸರಿಯಾದ ಸಿದ್ಧಾಂತವನ್ನು ಗ್ರಹಿಸಿದರೂ ಸಹ, ಆ ವ್ಯಕ್ತಿ ಪ್ರಾಮಾಣಿಕನಲ್ಲದಿದ್ದರೆ ಮತ್ತು ಸಮರ್ಪಣಾ ಮನೋಭಾವವನ್ನು ಹೊಂದಿಲ್ಲದಿದ್ದರೆ, ಆತ ಆ ಸಿದ್ಧಾಂತಕ್ಕೆ ಆಕಾರವನ್ನು ಕೊಡಲಾರ, ಅದನ್ನು ಕ್ರಿಯೆಯಾಗಿ ಪರಿವರ್ತಿಸಲಾರ. ಕ್ರಾಂತಿಕಾರಿಗಳಿಗಾಗಲಿ ಅಥವಾ ಪ್ರತಿಕ್ರಾಂತಿಕಾರಿಗಳಿಗಾಗಲೀ ಯಾವುದೇ ವಿಚಾರವನ್ನು ಕ್ರಿಯೆಯಾಗಿ ಪರಿವರ್ತಿಸಬೇಕಾದರೆ ಅವರಿಗೆ ಪ್ರಾಮಾಣಿಕತೆ ಅವಶ್ಯವಾಗುತ್ತದೆ. ಅವರು ಏನನ್ನಾದರೂ ಸಾಧಿಸಬೇಕೆಂದಿದ್ದರೆ, ಅವರು ಅಧಿಕಾರ ರಚನೆಯನ್ನು ಬದಲಾಯಿಸಬೇಕೆಂದಿದ್ದರೆ, ಅವರು ಕ್ರಾಂತಿ ಅಥವಾ ಪ್ರತಿಕ್ರಾಂತಿಯನ್ನು ನೆರವೇರಿಸಬೇಕೆಂದಿದ್ದರೆ, ಅವರಿಗೆ ಸಮರ್ಪಣಾ ಮನೋಭಾವ ಬೇಕು. ಅವರಿಗೆ ಒಂದು ರೀತಿಯ ಶಿಸ್ತು ಬೇಕು. ಅವರಿಗೆ ದೃಢಸಂಕಲ್ಪ ಬೇಕು. ಇವೆಲ್ಲಾ ಮೂಲಭೂತ ವಿಷಯಗಳು. ಚಾರಿತ್ರ್ಯದ ಈ ಗುಣಗಳಿಲ್ಲದೆ ನೀವು ಏನನ್ನೂ ಮಾಡಲು ಆಗುವುದಿಲ್ಲ. ಆದರೆ ಮುಂದಿನ ಅವಶ್ಯಕ ಪ್ರಶ್ನೆ ಮತ್ತು ಅತಿಮುಖ್ಯ ಪ್ರಶ್ನೆಯೆಂದರೆ ಸರಿಯಾದ ಮತ್ತು ವೈಜ್ಞಾನಿಕ ದೃಷ್ಟಿಕೋನ ಹಾಗೂ ಸರಿಯಾದ ಮೂಲ ರಾಜಕೀಯ ಪಥವನ್ನು ಹೊಂದುವುದು; ಅವುಗಳಿಲ್ಲದೆ ಸಮರ್ಪಣಾ ಮನೋಭಾವ ಮತ್ತು ತ್ಯಾಗ ಮಾಡುವ ಶಕ್ತಿಯಿದ್ದರೂ ನೀವು ಏನನ್ನೂ ಮಾಡಲು ಸಾಧ್ಯವಾಗುವುದಿಲ್ಲ, ಬದಲಿಗೆ ನೀವು ಹಾನಿಕಾರವಾದದ್ದನ್ನು ಮಾಡುವಿರಿ. ಏಕೆಂದರೆ ನೀವು ಮಾಡುವ ಪ್ರತಿಯೊಂದು ಕಾರ್ಯವೂ ಜನತೆಯ ಧ್ಯೇಯವನ್ನು ಪೂರೈಸಲು ಸಾಧ್ಯವಾಗದಿದ್ದರೆ, ಬದಲಾವಣೆಯ ಪ್ರಕ್ರಿಯೆಯನ್ನು ತ್ವರಿತಗೊಳಿಸಲಾಗದಿದ್ದರೆ, ಅದು ಖಂಡಿತವಾಗಿ ತಟಸ್ಥವಾಗಿಯಂತೂ

ಇರುವುದಿಲ್ಲ. ಅದು ಪರಿಣಾಮಹೀನ ಎಂದಲ್ಲ. ಅದು ನಿಶ್ಚಿತವಾಗಿ, ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ಪ್ರಗತಿಗಾಮಿ ಚಳುವಳಿಗಳ ಮೇಲೆ ಪ್ರತಿಕೂಲ ಪರಿಣಾಮವನ್ನು ಹೊಂದಿರುತ್ತದೆ. ಪ್ರತಿಗಾಮಿಗಳನ್ನು ಬಲಪಡಿಸುತ್ತದೆ. ಪ್ರತಿಯೊಂದು ಕ್ರಿಯೆಗೂ ಅದರ ಪ್ರತಿಕ್ರಿಯೆ ಇರುತ್ತದೆ. ಕ್ರಿಯೆ ಸರಿಯಾಗಿದ್ದರೆ, ಪ್ರತಿಕ್ರಿಯೆಯೂ ಸರಿಯಾಗಿರುತ್ತದೆ. ಕ್ರಿಯೆ ತಪ್ಪಾಗಿದ್ದರೆ, ಅದಕ್ಕೆ ಯಾವ ಪ್ರತಿಕ್ರಿಯೆಯೂ ಇರುವುದಿಲ್ಲವೆಂದು ಭಾವಿಸಬೇಡಿ. ಅದು ಹಾಗಲ್ಲ, ಅದಕ್ಕೆ ಕೆಟ್ಟ ಪ್ರತಿಕ್ರಿಯೆ ಇರುತ್ತದೆ. ಒಂದಲ್ಲ ಒಂದು ರೀತಿಯಲ್ಲಿ ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನು ಬಲಿಷ್ಠಗೊಳಿಸಲು ಅದು ಪ್ರತಿಗಾಮಿಗಳಿಗೆ ಅವಕಾಶ ನೀಡುತ್ತದೆ. ಆದ್ದರಿಂದ ಹೋರಾಟದ ಸರಿಯಾದ ಧೋರಣೆ, ಸರಿಯಾದ ಮೂಲ ರಾಜಕೀಯ ಪಥ ಮತ್ತು ಕಾರ್ಯಕ್ರಮವನ್ನು ಹೊಂದುವುದು ಮೂಲಭೂತ ಅವಶ್ಯಕತೆಯಾಗಿದೆ. ನೀವು ಇದನ್ನು ಎದುರಿಸದೆ ದೂರ ಸರಿಯಲು ಸಾಧ್ಯವಿಲ್ಲ ಅಥವಾ ಹೋರಾಡೋಣ, ಕೆಲಸ ಮಾಡೋಣ, ಹೋರಾಟದ ಮೂಲಕ ಸರಿಯಾದ ರಾಜಕೀಯ ಪಥ ಮತ್ತು ಆಲೋಚನೆ ತಾನಾಗಿಯೇ ಹೊರಹೊಮ್ಮುತ್ತದೆ ಎಂಬ ಲಘುವಾದ ಧೋರಣೆಯಿಂದ ಇದನ್ನು ನೋಡಲು ಸಾಧ್ಯವಿಲ್ಲ. ದುರುದ್ದೇಶವಿರುವ ಠಕ್ಕರು, ವಂಚಕ ಭಾಷಣಚತುರರು, ಸ್ವಾರ್ಥಿಗಳು ಮಾತ್ರ ಈ ವಿಚಾರವನ್ನು ಗೊಂದಲಕ್ಕೀಡುಮಾಡಲು ಹೀಗೆ ಮಾತನಾಡುತ್ತಾರೆ. ನಿಜ, ನೀವು ಕೆಲಸ ಮಾಡಲೇಬೇಕು. ನಾನೀಗಾಗಲೇ ಹೇಳಿರುವಂತೆ, ನೀವು ಕೆಲಸ ಮಾಡದಿದ್ದರೆ, ಒಳ್ಳೆಯ ಕಾರ್ಯಕ್ರಮಗಳೆಷ್ಟೇ ಇದ್ದರೂ ಮತ್ತು ಸುಂದರವಾದ, ಉದಾತ್ತವಾದ ವೈಚಾರಿಕತೆಯಿದ್ದರೂ ಏನನ್ನೇ ಆಗಲಿ ಸೃಷ್ಟಿಸಲು ನೀವು ಸಂಪೂರ್ಣ ವಿಫಲರಾಗುತ್ತೀರಿ. ನೀವು ನಿಷ್ಪ್ರಯೋಜಕರಾಗುತ್ತೀರಿ, ಹೀಗಾದಲ್ಲಿ ನೀವೇನನ್ನೂ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಕ್ರಿಯಾಶೀಲತೆ ಪ್ರಾಥಮಿಕ ಅವಶ್ಯಕತೆ. ಜನತೆಯ ನಡುವೆ ಸರಿಯಾದ ಕ್ರಾಂತಿಕಾರಿ ಪಥವನ್ನು ಕೊಂಡೊಯ್ಯಲು ಮತ್ತು ದೈನಂದಿನ ಹೋರಾಟಕ್ಕಾಗಿ ಅವರನ್ನೇ ಸಂಘಟಿಸಲೋಸುಗ ಶಿಕ್ಷಣ ನೀಡಲು ಮತ್ತು ಜನತೆಯ ರಾಜಕೀಯ ಶಕ್ತಿಯನ್ನು ಬೆಳೆಸುವಂತಹ ರೀತಿಯಲ್ಲಿ ಈ ಹೋರಾಟಗಳನ್ನು ನಿರ್ವಹಿಸಲು ನಮಗೆ ಸಮರ್ಪಣಾ ಮನೋಭಾವ, ಕೆಲಸ, ಶಿಸ್ತು, ಜನರ ಬಳಿ ಹೋಗುವುದು ಇವೆಲ್ಲವೂ ಅವಶ್ಯಕ. ಕಾಮ್ರೇಡರೇ, ನಾವು ಜನರ ಬಳಿ ಹೋಗುವುದು ಏತಕ್ಕಾಗಿ? ಖಂಡಿತವಾಗಿ ಅವರನ್ನು ಕೇವಲ ಸಾಧಾರಣ ಮತ್ತು ವ್ಯಾಸಂಗ ಮಾದರಿಯ ಅರ್ಥದಲ್ಲಿ ಶಿಕ್ಷಿತರನ್ನಾಗಿ ಮಾಡಲು ಅಲ್ಲ. ಶಿಕ್ಷಣ ಇಲ್ಲಿ ವಿಶಿಷ್ಟ ಉದ್ದೇಶವನ್ನು ಹೊಂದಿದೆ. ಅದೆಂದರೆ ಎಲ್ಲಾ ರೀತಿಯ ಅನ್ಯಾಯಗಳ ಮತ್ತು ಶೋಷಣೆಗಳ ವಿರುದ್ಧ ಜನತೆಯನ್ನು ಅವರ ಹೋರಾಟಗಳಲ್ಲಿ ಸಂಘಟಿಸುವುದು ಹಾಗೂ ಈ ಹಾದಿಯಲ್ಲಿ ಅಂತಿಮವಾಗಿ ದೇಶದಲ್ಲಿನ ನಿರಂಕುಶ ಆಳ್ವಿಕೆಯನ್ನು ಕಿತ್ತೊಗೆದು ರಾಷ್ಟ್ರದ ಭವಿತವ್ಯವನ್ನು ನಿರ್ಧರಿಸಬೇಕಾದಂತಹ ಅಜೇಯ ರಾಜಕೀಯ ಶಕ್ತಿಯನ್ನು

ಅವರಲ್ಲಿ ಬೆಳೆಸುವುದು. ಇದಕ್ಕಾಗಿ ನಾವು ಜನತೆಯ ಬಳಿ ಹೋಗುತ್ತೇವೆಯೇ ಹೊರತು ಜನರ ಸೇವೆ ಮಾಡುವ ಪರೋಪಕಾರಿ ಧೋರಣೆಯನ್ನು ಹೊಂದಿ ಆಗಾಗ ಅವರ ಬಳಿ ಹೋಗುವ ರಾಮಕೃಷ್ಣಾಶ್ರಮದ ಸಂತರಂತಲ್ಲ. ವಾಸ್ತವವಾಗಿ ಅವರು ವಿಷಯವನ್ನು ಗೊಂದಲಕ್ಕೀಡುಮಾಡುತ್ತಾರೆ. ಜನತೆಯ ಬಳಿ ಹೋಗುವುದೇನೋ ಮಹಾನ್ ಕಾರ್ಯವೇ ಸರಿ. ಆದರೆ ತಪ್ಪು ಪರಿಹಾರವನ್ನು ಹಿಡಿದುಕೊಂಡು ಜನತೆಯ ಬಳಿ ಸಾರುವುದು ನಿಜಕ್ಕೂ ಪ್ರಮಾದವೇ. ಏಕೆಂದರೆ, ಅವರೇ ಗೊಂದಲಕ್ಕೊಳಪಟ್ಟಿರುವುದರಿಂದ (ಅವರು ಪ್ರಾಮಾಣಿಕರಾಗಿದ್ದಲ್ಲಿ) ಅವರು ಜನಮನದಲ್ಲಿ ಗೊಂದಲವನ್ನಲ್ಲದೆ ಇನ್ನೇನನ್ನೂ ಹರಡಲು ಸಾಧ್ಯವಿಲ್ಲ. ಎಲ್ಲಕ್ಕೂ ಮಿಗಿಲಾಗಿ, ಅವರು ಜನರ ಗಮನವನ್ನು ಕ್ರಾಂತಿಕಾರಿ ಹೋರಾಟಗಳಿಂದ ನಿಗೂಢವಾದ, ಅಂಧವಿಶ್ವಾಸದ ಹಾದಿಗೆ ಸೆಳೆಯಲು ಯತ್ನಿಸುತ್ತಾರೆ. ಅಂತಹ ಸಂದರ್ಭದಲ್ಲಿ ನಾನು ಹೇಳುವುದು, ಜನರನ್ನು ಅವರ ಪಾಡಿಗೆ ಬಿಟ್ಟು ಬಿಡಿ. ಜನರೇ ಒಂದು ದಿನ ಸರಿಯಾದ ಮಾರ್ಗವನ್ನು ಕಂಡುಕೊಳ್ಳುತ್ತಾರೆ. ಆದರೆ ಅವರಿಗೆ ತಪ್ಪು ಪರಿಹಾರವನ್ನು ಕೊಡಬೇಡಿ, ಅವರನ್ನು ಗೊಂದಲಕ್ಕೀಡು ಮಾಡಬೇಡಿ, ಅವರನ್ನು ಹಾದಿ ತಪ್ಪಿಸಬೇಡಿ, ಅವರ ಮನದಲ್ಲಿ ಇನ್ನೂ ಉಳಿದಿರುವ ಅಜ್ಞಾನದ, ತಪ್ಪು ತಿಳಿವಳಿಕೆಯ ಪೂರ್ವಗ್ರಹಗಳ ಮತ್ತು ಅನೇಕ ಹಳೆಯ ವಿಚಾರಗಳ ಲಾಭವನ್ನು ಪಡೆಯಬೇಡಿ. ಆದ್ದರಿಂದ ನಮ್ಮ ಕರ್ತವ್ಯವಿರುವುದು, ನಮ್ಮ ಉದ್ದೇಶವಿರುವುದು ಜನತೆಯನ್ನು ಸಂಘಟಿಸಲೋಸುಗ ಅವರಿಗೆ ಶಿಕ್ಷಣ ನೀಡಲು ಅವರ ಬಳಿ ಹೋಗುವುದು. ಅವರನ್ನು ಸಂಘಟಿಸುವ ಏಕೈಕ ಉದ್ದೇಶ ಸಹ ಕೇವಲ ಅವರ ದೈನಂದಿನ ಆರ್ಥಿಕ ವಿಷಯಗಳ ಅಥವಾ ಸಂಕಷ್ಟಗಳ ವಿರುದ್ಧದ ಹೋರಾಟಗಳನ್ನು ಮುನ್ನಡೆಸಲು ಮಾತ್ರವಲ್ಲ, ಬದಲಿಗೆ ಒಂದು ದಿನ, ಜನತೆ ಒಂದು ಸಂಘಟಿತ ರಾಜಕೀಯ ಶಕ್ತಿಯಾಗಿ ಸಂದರ್ಭಕ್ಕೆ ಸರಿಯಾಗಿ ಎದ್ದು ನಿಂತು ಶಸ್ತ್ರಗಳನ್ನು ಹಿಡಿದು ದೇಶದ ಭವಿತವ್ಯವನ್ನು ನಿರ್ಧರಿಸಲು ಸಾಧ್ಯವಾಗುವಂತೆ, ಅಂತಿಮವಾಗಿ ಅವರ ರಾಜಕೀಯ ಶಕ್ತಿಗೆ ಜನ್ಮ ನೀಡಲು.

ಆದ್ದರಿಂದ, ನಮ್ಮ ಸಮಾಜದಂತಹ ವರ್ಗವಿಭಜಿತ ಸಮಾಜದಲ್ಲಿ ರಾಷ್ಟ್ರ, ರಾಷ್ಟ್ರದ ಹಿತಾಸಕ್ತಿ, ಶಿಕ್ಷಣ ಮತ್ತು ಶೈಕ್ಷಣಿಕ ಸುಧಾರಣೆಗಳು, ವಿದ್ಯಾರ್ಥಿಗಳ ಮತ್ತು ಜನತೆಯ ಹಿತಾಸಕ್ತಿಯ ಕುರಿತಾದ ವಿಷಯಗಳ ಬಗ್ಗೆ ವರ್ಗ ಉಲ್ಲೇಖವಿಲ್ಲದೆ ಚರ್ಚಿಸಿದರೆ ಮತ್ತು ಅಸ್ತಿತ್ವದಲ್ಲಿರುವ ವರ್ಗಹೋರಾಟದೊಂದಿಗೆ ಸಂಬಂಧಿಸದೆ ಚರ್ಚಿಸಿದರೆ ಆಗ ಯಾರೇ ಆಗಲಿ ತಪ್ಪು ಮಾಡುವುದು ಖಂಡಿತ ಮತ್ತು ಬಂಡವಾಳಶಾಹಿಗಳ ಯೋಜನೆಗೆ ಬಲಿಯಾಗುವುದು ನಿಶ್ಚಿತ. ಒಂದು ವರ್ಗವಿಭಜಿತ ಸಮಾಜದಲ್ಲಿ ಏಕಮಾತ್ರ ದೃಷ್ಟಿಕೋನವಿರುವುದು ಸಾಧ್ಯವಿಲ್ಲವಾದ್ದರಿಂದ, ಈ ಸಮಸ್ಯೆಗಳ ಕುರಿತಾದ ದೃಷ್ಟಿಕೋನ ಬಹುಸಂಖ್ಯಾತ ಜನತೆಯ

ಹಿತಾಸಕ್ತಿಯನ್ನು ಪ್ರತಿಬಿಂಬಿಸುತ್ತಿದ್ದು ಜನಸಮುದಾಯದ ಕ್ರಾಂತಿಕಾರಿ ಹೋರಾಟದ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ಪೂರಕವಾಗಿದೆಯೋ ಅಥವಾ ಸಮಾಜದ ಸಂಪತ್ತು ಮತ್ತು ಆಸ್ತಿ, ಉತ್ಪಾದನಾ ಸಾಧನಗಳೆಲ್ಲವನ್ನು ಕಸಿದುಕೊಂಡು ದೇಶವನ್ನು ವಿನಾಶದತ್ತ ತಳ್ಳುತ್ತಿರುವ ಆಳುವ ಬಂಡವಾಳಶಾಹಿ ವರ್ಗದ ದೃಷ್ಟಿಕೋನದೊಂದಿಗೆ ಮೂಲಭೂತವಾಗಿ ಹೊಂದಿಕೆಯಲ್ಲಿದೆಯೋ ಎಂಬುದನ್ನು ನಿರ್ಧರಿಸಿಕೊಳ್ಳುವಲ್ಲಿ ನೀವು ವಿಶೇಷ ಎಚ್ಚರ ವಹಿಸಬೇಕು.

ಕಾಮ್ರೇಡರೇ, ಒಂದು ವರ್ಗವಿಭಜಿತ ಸಮಾಜದಲ್ಲಿ ಶೈಕ್ಷಣಿಕ ಸುಧಾರಣೆಗಳನ್ನು ಮತ್ತು ಎಲ್ಲಾ ಶೈಕ್ಷಣಿಕ ಸಮಸ್ಯೆಗಳನ್ನು ಎರಡು ಧೋರಣೆಗಳಿಂದ, ಎರಡು ಜಾಗತಿಕ ದೃಷ್ಟಿಕೋನಗಳಿಂದ ಮಾತ್ರ ವೀಕ್ಷಿಸಲು ಸಾಧ್ಯ ಎಂಬುದನ್ನು ನೀವು ಯಾವಾಗಲೂ ನೆನಪಿನಲ್ಲಿಡಬೇಕು. ಒಂದು, ಬೂರ್ಜ್ವಾ ವರ್ಗದ, ಆಳುವ ವರ್ಗದ, ಶೋಷಕರ ಜಾಗತಿಕ ದೃಷ್ಟಿಕೋನವನ್ನು ಬಿಂಬಿಸುತ್ತಿದ್ದು, ಅದು ದೇಶದ ಸಾಮಾಜಿಕ ಹಾಗೂ ರಾಜಕೀಯ ಸಮಸ್ಯೆಗಳ ಬಗ್ಗೆ ಕರ್ತವ್ಯದ ಉಪೇಕ್ಷೆ, ವೃತ್ತಿ ಅಹಂಕಾರ, ಸಂಪೂರ್ಣ ಔದಾಸೀನ್ಯತೆಯಂತಹ ಸಾಮಾಜಿಕ ಪ್ರಗತಿಗೆ ಪ್ರತಿಕೂಲವಾದ ಮಾನಸಿಕ ಪ್ರವೃತ್ತಿಗಳನ್ನು ಬೆಳೆಸುವಂತಹುದು; ತರ್ಕ ಹಾಗೂ ವಿಜ್ಞಾನಗಳ ಆಧಾರದಲ್ಲಿರದೆ ಸಹಜವಾಗಿಯೇ ನಂಬಿಕೆ, ಧರ್ಮ ಹಾಗೂ ಎಲ್ಲ ರೀತಿಯ ಅಂಧಶ್ರದ್ಧೆಯ ವಿಚಾರಗಳನ್ನಾಧರಿಸಿದ ಮನೋಭಾವವನ್ನು ಬೆಳೆಸಿ, ಅಂತಿಮವಾಗಿ ಸಾಮಾಜಿಕ ಕ್ರಿಯೆಯ ಬಗ್ಗೆ ತಿರಸ್ಕಾರವನ್ನು ಸೃಷ್ಟಿಸುವಂತಹುದು; ಶೋಷಕರ ಜಾಗತಿಕ ದೃಷ್ಟಿಕೋನ ಈ ರೀತಿಯಲ್ಲಿ ಶಿಕ್ಷಣ ವ್ಯವಸ್ಥೆಯನ್ನು ತನ್ನ ಉದ್ದೇಶಕ್ಕನುಗುಣವಾಗಿ ಶೃತಿಗೊಳಿಸುವ, ನಮೂನೀಕರಿಸುವ ಹಾಗೂ ರಚಿಸುವ ಧ್ಯೇಯವನ್ನು ಹೊಂದಿದೆ. ಇನ್ನೊಂದು ಇವೆಲ್ಲಾ ಪ್ರಶ್ನೆಗಳನ್ನು ಒಂದು ಕ್ರಾಂತಿಕಾರಿ ದೃಷ್ಟಿಕೋನದಿಂದ, ಎಂದರೆ, ಕಾರ್ಮಿಕ ವರ್ಗ ದೃಷ್ಟಿಕೋನದಿಂದ ಗ್ರಹಿಸುವಂತಹುದ್ದಾಗಿದೆ. ಅರ್ಥಾತ್, ಬೂರ್ಜ್ವಾಜಿಯನ್ನು ಕ್ರಾಂತಿಕಾರಿ ರೀತಿಯಲ್ಲಿ ಅಧಿಕಾರದಿಂದ ಕಿತ್ತೊಗೆದು ನಮ್ಮ ಉತ್ಪಾದನಾ ವ್ಯವಸ್ಥೆಯನ್ನು ತನ್ಮೂಲಕ ವಿಜ್ಞಾನ, ತಂತ್ರಜ್ಞಾನ, ನೈತಿಕತೆ, ಮೌಲ್ಯಗಳನ್ನು ಬಂಡವಾಳಶಾಹಿ ಶೋಷಣೆಯ ಕಬಂಧಬಾಹುಗಳಿಂದ ಪಾರಾಗಿಸಬೇಕಷ್ಟೇ. ಇಂತಹ ಧ್ಯೇಯಗಳನ್ನು ಹೊಂದಿರುವ, ನಮ್ಮ ದೇಶದಲ್ಲಿ ಒಂದು ಮೂಲಭೂತ ರಾಜಕೀಯ, ಆರ್ಥಿಕ ಹಾಗು ಸಾಮಾಜಿಕ ಪರಿವರ್ತನೆಗಾಗಿ ನಡೆಯುವ ಕ್ರಾಂತಿಕಾರಿ ಆಂದೋಲನವು ಅತ್ಯಂತ ತುರ್ತಾದ ಅವಶ್ಯಕತೆಯಾಗಿದೆ. ಮೇಲೆ ತಿಳಿಸಿದ ಕ್ರಾಂತಿಕಾರಿ ದೃಷ್ಟಿಕೋನವು ಈ ಕ್ರಾಂತಿಕಾರಿ ಆಂದೋಲನದ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ನಿಶ್ಚಿತವಾಗಿ ಪೂರಕವಾದಂಥ ವಿವೇಚನೆಯ ದ್ವಾರವನ್ನು ತೆರೆಯುತ್ತದೆ. ವೈಜ್ಞಾನಿಕ ತಿಳುವಳಿಕೆ, ವೈಜ್ಞಾನಿಕ ಮನೋಭಾವಗಳನ್ನು ಬೆಳೆಸುತ್ತದೆ. ಆದ್ದರಿಂದ ಶೈಕ್ಷಣಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಎರಡು ದೃಷ್ಟಿಕೋನಗಳು ಮಾತ್ರ ಇರುವುದು ಸಾಧ್ಯ. ಏಕೈಕ ದೃಷ್ಟಿಕೋನವಲ್ಲ.

ಕಾಮ್ರೇಡರೇ, ನಾವು ಬಂಡವಾಳಶಾಹಿ ದೇಶದಲ್ಲಿ ಬದುಕುತ್ತಿದ್ದೇವೆ. ಪಾಶ್ಚಿಮಾತ್ಯ ಶ್ರೀಮಂತ ಸಾಮ್ರಾಜ್ಯಶಾಹಿ ರಾಷ್ಟ್ರಗಳಿಗೆ ಹೋಲಿಸಿದಾಗ ನಮ್ಮದು ಹಿಂದುಳಿದ ರಾಷ್ಟ್ರವಿರಬಹುದು; ಆದರೆ ನಮ್ಮದು ಬಂಡವಾಳಶಾಹಿ ರಾಷ್ಟ್ರವೆನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಈ ಬಂಡವಾಳವಾದದ ಗುಣಲಕ್ಷಣವೇನು? ಸಮಾಜದ ಇಡಿಯ ಆರ್ಥಿಕ ಜೀವನವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿರುವ ಬ್ಯಾಂಕಿಂಗ್ ಮತ್ತು ಕೈಗಾರಿಕಾ ಬಂಡವಾಳದ ಸಮ್ಮಿಲನದ ಮೂಲಕ ರಚನೆಯಾದ ಹಣಕಾಸು ಬಂಡವಾಳ ಮತ್ತು ಹಣಕಾಸು ಪ್ರಭುತ್ವದ ಮಟ್ಟಿಗೆ ಹಾಗೂ ರಫ್ತಾಗುತ್ತಿರುವ ಬಂಡವಾಳದ ಪ್ರಮಾಣ ಹಾಗೂ ಮೊತ್ತದ ಮಟ್ಟಿಗೆ ಹೇಳಬೇಕೆಂದರೆ ಈಗಾಗಲೇ ನಮ್ಮ ದೇಶ ಗುಣದಲ್ಲಿ ಸಾಮ್ರಾಜ್ಯಶಾಹಿಯಾಗಿದೆ. ಈ ವಿಷಯಗಳ ಬಗ್ಗೆ ನಾನು ನೆನ್ನೆಯೇ ಅಂದರೆ ಉದ್ಘಾಟನಾ ಅಧಿವೇಶನದಲ್ಲಿ ಸವಿವರವಾಗಿ ಚರ್ಚಿಸಿದ್ದೇವೆ. ಈ ಅಧಿವೇಶನದಲ್ಲಿ ಪುನಃ ಈ ವಿಷಯದ ಬಗ್ಗೆ ಚರ್ಚಿಸುತ್ತಾ ಹೋಗುವುದು ಅವಶ್ಯವಿದೆ ಎಂದು ನನಗನಿಸುವುದಿಲ್ಲ. ಈ ಪ್ರಶ್ನೆಗಳ ಬಗ್ಗೆ ಮತ್ತೆ ಮತ್ತೆ ಚರ್ಚೆಗಳನ್ನು ನಡೆಸಿ ಅಂತಿಮ ನಿರ್ಧಾರಕ್ಕೆ ಬರಲು ನಮಗೆ ಸಾಕಷ್ಟು ಸಮಯಾವಕಾಶವಿದೆ. ಆದರೆ ಇದೊಂದು ಬಂಡವಾಳಶಾಹಿ ವ್ಯವಸ್ಥೆ ಎಂಬುದಂತೂ ನಿಶ್ಚಿತ. ಈ ನಮ್ಮ ದೇಶದಲ್ಲಿ ನಾವು ಹೊಂದಿರತಕ್ಕಂಥ ರಾಜ್ಯವನ್ನು ಒಂದು ಬಂಡವಾಳಶಾಹಿ ರಾಷ್ಟ್ರೀಯ ರಾಜ್ಯ ಅರ್ಥಾತ್ ಬಂಡವಾಳಶಾಹಿ ರಾಜ್ಯಯಂತ್ರ ಎಂದು ಮಾತ್ರ ಕರೆಯಬಹುದಾಗಿದೆ ಮತ್ತು ಆಳುವ ಬಂಡವಾಳಶಾಹಿಗಳು ನಮ್ಮ ಈ ದೇಶದ ಬಂಡವಾಳಶಾಹಿ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಆರ್ಥಿಕತೆಯ ಶಕ್ತಿಗಳಿಗೆ ಕುರಿತಾದಂತೆ ಬಂಡವಾಳಶಾಹಿ ಉತ್ಪಾದನಾ ಸಂಬಂಧಗಳು ಮತ್ತು ಬಂಡವಾಳಶಾಹಿ ಉತ್ಪಾದನೆಯ ಪ್ರೇರಕಶಕ್ತಿ ಈಗಾಗಲೇ ಹಳೆಯದಾಗಿವೆ, ಮತ್ತು ಪ್ರಕ್ರಿಯೆಗೆ ಅಡೆತಡೆಯಾಗಿ ನಿಂತಿವೆ. ಆದ್ದರಿಂದ ಅದು ಒಂದಾದ ಮೇಲೊಂದು ಬಿಕ್ಕಟ್ಟಿಗೆ ಜನ್ಮ ನೀಡುತ್ತಿದೆ. ದುಸ್ಸಾಧ್ಯವಾದ ಒಂದು ಬಿಕ್ಕಟ್ಟಿನಿಂದ ಹೊರಬರಲು ಬಂಡವಾಳಶಾಹಿಗಳು ತೆಗೆದುಕೊಂಡ ಕ್ರಮ ಅವರನ್ನು ಇನ್ನೊಂದು ಕಠಿಣ ಬಿಕ್ಕಟ್ಟಿನಲ್ಲಿ ಸಿಲುಕಿಸುತ್ತಿದೆ. ನಾವು ಒಂದು ಬಿಕ್ಕಟ್ಟಿನಿಂದ ಹೊರಬರುತ್ತಿರುವುದು ಇನ್ನು ಹೆಚ್ಚಿನ ಗಂಭೀರ ಬಿಕ್ಕಟ್ಟಿಗೆ ಪ್ರವೇಶಿಸಲಷ್ಟೇ. ಈ ರೀತಿಯಾಗಿ ನಮ್ಮ ಆರ್ಥಿಕತೆ ಒಂದು ವಿಷವರ್ತುಲದೊಳಗೆ ಬಂಧಿಯಾಗಿದೆ. ಅದಕ್ಕೆ ಬೆಳವಣಿಗೆ ಇರಲು ಸಾಧ್ಯವಿಲ್ಲ ಮತ್ತೆ ಬೆಳವಣಿಗೆಗೆ ಉಸಿರಾಡುವಷ್ಟು ಅವಕಾಶ ಸಹ ಸಿಗುತ್ತಿಲ್ಲ. ಇದು ಪ್ರತಿಗಾಮಿ ಬಂಡವಾಳವಾದದ, ಪ್ರಸಕ್ತ ಮರಣಾಸನ್ನ, ಕೊಳೆತಕ್ಕೀಡಾದ ವಿಶ್ವ ಬಂಡವಾಳಶಾಹಿ ವ್ಯವಸ್ಥೆಯ ಅವಿಚ್ಛಿನ್ನ ಭಾಗ. 18ನೇ ಶತಮಾನದಲ್ಲಿ ಮುಕ್ತ ಸ್ಪರ್ಧೆಯ ಆಧಾರದ ಮೇಲೆ ಬೆಳೆದ ಬಂಡವಾಳವಾದಕ್ಕಿಂತ, ತನ್ನ ಪಾತ್ರ ಮತ್ತು ಲಕ್ಷಣಗಳಲ್ಲಿ ಪ್ರಗತಿಗಾಮಿಯಾಗಿದ್ದ ಅಂತರರಾಷ್ಟ್ರೀಯ ಬಂಡವಾಳವಾದಕ್ಕಿಂತ ಮತ್ತು ಆಂತರಿಕ

ಮತ್ತು ಹೊರಗಿನ ಮಾರುಕಟ್ಟೆಗಳ ಸತತವಾದ ಹಿಗ್ಗುವಿಕೆಯನ್ನು ಅನುಭೋಗಿಸುತ್ತಿದ್ದ ಬಂಡವಾಳವಾದದ ಸ್ವರೂಪಕ್ಕಿಂತ ಈಗಿನ ಬಂಡವಾಳವಾದದ ಸ್ವಭಾವ ಸ್ಪಷ್ಟವಾಗಿ ಭಿನ್ನವಾಗಿದೆ. ತನ್ನ ಬೆಳವಣಿಗೆಯ ಅಂದಿನ ಆರಂಭದ ಹಂತದಲ್ಲಿ ಬಂಡವಾಳವಾದವು ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ ಹಾಗೂ ಪ್ರಜಾತಂತ್ರಕ್ಕೆ ಹೆಚ್ಚಾಗಿ ಬದ್ಧವಾಗಿತ್ತು. ಮತ್ತು ಮಿಲಿಟರಿವಾದ ಹಾಗೂ ಅಧಿಕಾರಶಾಹಿಗಳಿಗೆ ಕಡಿಮೆ ಅಂಟಿಕೊಂಡಿತ್ತು. ಈಗ ಬಂಡವಾಳವಾದವು ಒಂದು ವಿಶ್ವವ್ಯವಸ್ಥೆಯಾಗಿ ಕೊಳೆತಕ್ಕೀಡಾಗಿದೆ ಮತ್ತು ಮರಣಾಸನ್ನವಾಗಿದೆ. ಅದು ತನ್ನ ಅತ್ಯುನ್ನತ ಹಂತವನ್ನು, ಸಾಮ್ರಾಜ್ಯವಾದದ ಹಂತವನ್ನು ತಲುಪಿದೆ ಮತ್ತು ಪ್ರತಿಗಾಮಿಯಾಗಿದೆ. ಮೇಲಾಗಿ ಅದು ತನ್ನ ತೀವ್ರ ಸಾರ್ವತ್ರಿಕ ಬಿಕ್ಕಟ್ಟಿನ ಮೂರನೇ ಹಂತವನ್ನು ತಲುಪಿದೆ. ಆದ್ದರಿಂದ ಅದು ಒಂದಾದ ಮೇಲೊಂದು ಬಿಕ್ಕಟ್ಟಿಗೆ ಜನ್ಮ ನೀಡುತ್ತಿದೆ. ಈ ಸಂದಿಗ್ಧತೆಯಿಂದ ಹೊರಬರಲು ದಾರಿ ಕಾಣದೆ, ಅದು ಆರ್ಥಿಕತೆಯ ಅವಿರತ ಮಿಲಿಟರೀಕರಣದ ಕ್ರಮಕ್ಕೆ ಮೊರೆಹೊಕ್ಕಿದೆ. ಆದ್ದರಿಂದ ಬಂಡವಾಳವಾದ ಇಂದು ಹೆಚ್ಚು ಹೆಚ್ಚಾಗಿ ಮಿಲಿಟರಿವಾದಕ್ಕೆ ಅಧಿಕಾರಶಾಹಿಗೆ ಮತ್ತು ಯುದ್ಧಕ್ಕೆ ಅಂಟಿಕೊಂಡಿದೆ. ಇದು ಎಲ್ಲೆಡೆಯಲ್ಲೂ, ಅಭಿವೃದ್ಧಿ ಹೊಂದಿರುವ ಮತ್ತು ಹೊಂದದಿರುವ ದೇಶಗಳೆರಡರಲ್ಲೂ ಬಂಡವಾಳವಾದಕ್ಕೆ ಹೆಚ್ಚು ಕಡಿಮೆ ಅನ್ವಯವಾಗುವ ಸತ್ಯವೇ, ಆದ್ದರಿಂದ ಆರ್ಥಿಕರಂಗದಲ್ಲಿನ ಈ ಬಿಕ್ಕಟ್ಟು ಮತ್ತು ಅಭದ್ರತೆಗಳು ಸಮಾಜದ ಮೇಲ್‌ರಚನೆಯಲ್ಲಿ, ನೈತಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪ್ರತಿಬಿಂಬಿತವಾಗುತ್ತಿವೆ. ಮೇಲ್‌ರಚನೆ ಎಂದರೆ ಸಮಾಜದಲ್ಲಿನ ವೈಚಾರಿಕ, ರಾಜಕೀಯ, ನೈತಿಕ, ಸಾಂಸ್ಕೃತಿಕ, ತಾತ್ವಿಕ, ಕಲಾತ್ಮಕ ವಿಚಾರಗಳು– ಇವನ್ನು ನಾವು ಆರ್ಥಿಕ ತಳಹದಿಯ ಮೇಲ್‌ರಚನೆ ಎನ್ನುತ್ತೇವೆ. ಆದ್ದರಿಂದ ಆರ್ಥಿಕ ಅನಿಶ್ಚಿತತೆ, ಸಂದಿಗ್ಧತೆ, ತೀವ್ರ ಬಿಕ್ಕಟ್ಟು ಮತ್ತು ಅಭದ್ರತೆ ಸಹಜವಾಗಿಯೇ ಮೇಲ್‌ರಚನೆಯಲ್ಲಿ ಪ್ರತಿಬಿಂಬಿತವಾಗುತ್ತವೆ. ಕಾಮ್ರೇಡರೇ, ನಮ್ಮ ಎಲ್ಲಾ ಸಮಸ್ಯೆಗಳ, ನಮ್ಮ ಎಲ್ಲಾ ಸಾಮಾಜಿಕ ಬೇನೆಗಳ ಮೂಲ ಇಲ್ಲಿ ಅಡಕವಾಗಿದೆ.

ಕಾಮ್ರೇಡರೇ, ನಮ್ಮ ಕ್ರಾಂತಿಯು ಗುಣದಲ್ಲಿ ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಯಾಗಿರುವುದರಿಂದ, ಯಶಸ್ವಿ ಕ್ರಾಂತಿಗೆ ಹಾದಿ ಮಾಡಿಕೊಡಲು ವೈಚಾರಿಕ ಕ್ಷೇತ್ರದಲ್ಲಿ ಎಲ್ಲ ಬಗೆಯ ಸೋಷಲ್ ಡೆಮಾಕ್ರೆಟಿಕ್ ಶಕ್ತಿಗಳನ್ನು ಅರ್ಥಾತ್ ಶ್ರಮ ಮತ್ತು ಬಂಡವಾಳಗಳ ನಡುವಿನ ಹೊಂದಾಣಿಕೆಯ ಶಕ್ತಿಗಳನ್ನು ಸಂಪೂರ್ಣವಾಗಿ ಸೋಲಿಸಬೇಕು ಎಂಬುದನ್ನು ಯಾವತ್ತೂ ನೆನಪಿಡಿ. ಸಮೃದ್ಧ ಜೀವನವನ್ನು ನಡೆಸುತ್ತಿರುವ ಕೆಲವು ಉಚ್ಚವರ್ಗದವರೆಂದು ಕರೆಸಿಕೊಳ್ಳುವವರನ್ನು ಬಿಟ್ಟರೆ ಬಹುಭಾಗ ಜನತೆಗೆ ಇಂದಿರಾ ಗಾಂಧಿಯವರ ಪ್ರಜಾತಾಂತ್ರಿಕ ಸಮಾಜವಾದದ ಸಿದ್ಧಾಂತ ಮತ್ತು ಆಚರಣೆಯ ನಿಜವಾದ ಉದ್ದೇಶ ಬಹುಮಟ್ಟಿಗೆ ಬಯಲಾಗಿದೆ. ಆದರೆ ನಮ್ಮ ದೇಶದಲ್ಲಿ ವಿವಿಧ ರೀತಿಯ ಜನತಾ

ಪ್ರಜಾತಾಂತ್ರಿಕ ಕ್ರಾಂತಿಯ ಸಿದ್ಧಾಂತ ಮತ್ತು ರಣಕೌಶಲ್ಯಗಳ ಪ್ರತಿಪಾದಕರ ನೈಜ ಉದ್ದೇಶ ಜನತೆಯ ಬಹುಭಾಗದ ಮುಂದೆ ಇನ್ನೂ ಬಯಲಾಗಲಿಲ್ಲ.

ಜನತಾ ಪ್ರಜಾತಾಂತ್ರಿಕ ಕ್ರಾಂತಿಯ ಈ ಪ್ರತಿಪಾದಕರಿಂದ ಹಾದಿತಪ್ಪಿಸಲ್ಪಟ್ಟಿರುವ ಬಹಳಷ್ಟು ಜನ ಎಡವಾದಿ ಮನಸ್ಸುಳ್ಳವರು ಚೀನಾದಲ್ಲಿದ್ದ ಪರಿಸ್ಥಿತಿಗಿಂತ ವಿಭಿನ್ನವಾಗಿ ಇಲ್ಲಿ ಭಾರತದಲ್ಲಿ ಬಂಡವಾಳಶಾಹಿ ರಾಜ್ಯಯಂತ್ರವಿದೆ, ಆದ್ದರಿಂದಾಗಿ ಜನತಾ ಪ್ರಜಾತಾಂತ್ರಿಕ ಕ್ರಾಂತಿಯ ರಣನೀತಿ ಮತ್ತು ರಣಕೌಶಲ್ಯ ನಮ್ಮ ಸಮಾಜದಲ್ಲಿ ನಡೆಯುತ್ತಿರುವ ಕ್ರಾಂತಿಯ ವಾಸ್ತವಿಕ ಪ್ರಕ್ರಿಯೆಯ ಮೇಲೆ ಹೇರಲ್ಪಟ್ಟಿರುವ ಭ್ರಾಮಕ ಪರಿಕಲ್ಪನೆಯಲ್ಲದೆ ಮತ್ತೇನೂ ಅಲ್ಲ, ಜನತಾ ಪ್ರಜಾತಾಂತ್ರಿಕ ಕ್ರಾಂತಿಯ ಸಿದ್ಧಾಂತ ಮತ್ತು ರಣಕೌಶಲ್ಯದ ನೈಜ ಉದ್ದೇಶ ಜನತೆಯ ಗಮನವನ್ನು ನಿಜವಾದ ಶತ್ರುವಿನಿಂದ ಕಲ್ಪಿತ ಶತ್ರುವಿನೆಡೆಗೆ ಸೆಳೆಯುವುದೇ ಆಗಿದೆ ಎಂಬುದನ್ನು ಇನ್ನೂ ಅರ್ಥ ಮಾಡಿಕೊಂಡಿಲ್ಲ. ಆದ್ದರಿಂದ ಚೀನಾ ದೇಶದಲ್ಲಿದ್ದ ಪರಿಸ್ಥಿತಿಗಿಂತ ವಿಭಿನ್ನವಾಗಿ ನಮ್ಮ ದೇಶದಲ್ಲಿ ಜನತಾ ಪ್ರಜಾತಾಂತ್ರಿಕ ಕ್ರಾಂತಿಯ ಸಿದ್ಧಾಂತವು ನಮ್ಮ ರಾಜಕೀಯ ಚಳುವಳಿಗಳಲ್ಲಿನ ಸೋಷಲ್ ಡೆಮಾಕ್ರೆಟಿಕ್ ಪ್ರವೃತ್ತಿಗಳ ಹಲವು ರೂಪಗಳಲ್ಲಿ ಒಂದಲ್ಲದೇ ಬೇರೇನೂ ಅಲ್ಲ.

ಆದ್ದರಿಂದ ಕಾಮ್ರೇಡರೇ, ಬಂಡವಾಳವಾದವನ್ನು ನೀವು ನಿಜಕ್ಕೂ ಕೊನೆಗಾಣಿಸಬೇಕೆಂದಿದ್ದರೆ, ಪರಿಶ್ರಮದಾಯಕ ವೈಚಾರಿಕ–ರಾಜಕೀಯ ಹೋರಾಟದ ಮೂಲಕ ಮತ್ತು ಜನತೆಯ ನಡುವೆ ಕೆಲಸ ಮಾಡುವುದರ ಮೂಲಕ, ಇಂದಿರಾ ಗಾಂಧಿಯವರ ಡೆಮಾಕ್ರೆಟಿಕ್ ಸೋಷಲಿಸಮ್‌ನ ಸಿದ್ಧಾಂತ ಹಾಗೂ ಆಚರಣೆಗಳನ್ನು ಮತ್ತು ನಮ್ಮ ದೇಶದಲ್ಲಿನ ಎಲ್ಲಾ ರೀತಿಯ ಜನತಾ ಪ್ರಜಾತಾಂತ್ರಿಕ ಕ್ರಾಂತಿಯ ಸಿದ್ಧಾಂತ ಮತ್ತು ರಣಕೌಶಲ್ಯಗಳನ್ನು ಸೋಲಿಸಬೇಕಾಗಿದೆ. ಇದಲ್ಲದೇ ಯಾವುದೇ ನೆಪದಲ್ಲಾಗಲಿ ಬೇರೊಂದು ರೀತಿಯಲ್ಲಿ ಯೋಚಿಸುವವರು ವಾಸ್ತವವಾಗಿ ಸೋಷಲ್ ಡೆಮಾಕ್ರೆಟ್‌ರ ಸಾಲಿಗೆ ಸೇರುತ್ತಾರೆ.

ಕಾಮ್ರೇಡರೇ, ನಾನು ಸುಮ್ಮನೇ ಮಾತನಾಡಲಿಚ್ಛಿಸುವುದಿಲ್ಲ*. ಅದು ನನ್ನ ಅಭ್ಯಾಸವಲ್ಲ. ನಾನು ಮಾತನಾಡುವಾಗ ವಿಷಯದ ಬಗ್ಗೆ ಸಂಪೂರ್ಣ ಏಕಾಗ್ರ ಚಿತ್ತದೊಂದಿಗೆ ಮಾತನಾಡುತ್ತೇನೆ. ಸಹಜವಾಗಿಯೇ, ಚರ್ಚೆಯಲ್ಲಿ ನೀವೂ ಸಹ ಗಮನವನ್ನು ಕೇಂದ್ರೀಕರಿಸಲು ಪ್ರಯತ್ನಿಸಿರಿ ಎಂದು ಆಗ್ರಹ ಪಡಿಸಲು ನನಗೆ ಅಧಿಕಾರವಿದೆ. ಕಾಮ್ರೇಡರೇ, ನಾನು ಮಾತನಾಡುತ್ತಿರುವ ವಿಷಯ ನಿಮಗೆ ಕಠಿಣ ಎನಿಸಬಹುದೆಂಬುದನ್ನು ನಾನು ಅರಿತಿದ್ದೇನೆ. ಆದರೆ ನೀವು ಅಡೆತಡೆಗಳನ್ನು ನಿವಾರಿಸಿಕೊಂಡು ಮುನ್ನುಗ್ಗಬೇಕಾಗಿದೆ, ಅದನ್ನು ನೀವು

***ಸಭಾಂಗಣದ ದೂರದ ಮೂಲೆಯಲ್ಲಿ ಇಬ್ಬರು ಪ್ರತಿನಿಧಿಗಳು ಮಾತಿನಲ್ಲಿ ತೊಡಗಿದ್ದರು.**

ಸುಲಭವಾಗಿ ಮಾಡಲು ಸಾಧ್ಯವಿಲ್ಲ. ನೀವು ನಿಮ್ಮನ್ನೇ ಕಲಿಕೆಗೆ ಜ್ಞಾನಾರ್ಜನೆಗೆ ಪುನಃ ಪುನಃ ಒಳಪಡಿಸಬೇಕು. ಕಷ್ಟವಾದರೂ ಸಹ ನೀವು ಹಲವಾರು ವಿಷಯಗಳನ್ನು ತಿಳಿದುಕೊಳ್ಳಬೇಕು. ವಿಷಯಗಳನ್ನು ಅರಿತುಕೊಳ್ಳದೆ ನೀವು ಪರಿಸ್ಥಿತಿಯ ಮೇಲೆ ಪ್ರಭಾವ ಬೀರಲು ಸಾಧ್ಯವಿಲ್ಲ. ನೀವು ನಿರ್ಣಾಯಕ ಹಾಗೂ ನೇತಾರ ಪಾತ್ರವನ್ನು ವಹಿಸಬೇಕೆಂಬುದನ್ನು ಹೇಗೆ ತಾನೆ ಮರೆಯಲು ಸಾಧ್ಯ! ಆದ್ದರಿಂದ ನೀವು ಗಮನವಿರಿಸಬೇಕು ಹಾಗೂ ಜಾಗರೂಕರಾಗಿರಬೇಕು. ನೀವು ಕ್ರಾಂತಿಕಾರಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೆಂಬುದನ್ನೂ ಸಹ ನೆನಪಿನಲ್ಲಿಡಬೇಕು. ನಮ್ಮ ದೇಶವನ್ನು ಮುನ್ನಡೆಸುವ ಏನಾದರೂ ಒಳ್ಳೆಯದನ್ನು ಸೃಷ್ಟಿಸುವ ಧೈರ್ಯ ಮತ್ತು ದೃಢಸಂಕಲ್ಪ ನಮಗಿದೆ ಎಂದು ನೀವು ವಿದ್ಯಾರ್ಥಿಗಳು ನಿಜಕ್ಕೂ ಯೋಚಿಸುವ ಸಾಹಸ ಮಾಡುವುದಾದರೆ. ನೀವು ಖಂಡಿತವಾಗಿಯೂ ಗಮನವಿರಿಸಬೇಕು. ಇಲ್ಲದಿದ್ದರೆ ಯಾವುದೇ ಒಂದು ವಿಷಯದ ಬಗ್ಗೆ ಭಾಷಣ ಮಾಡುವುದರಲ್ಲಿ ಅರ್ಥವಿಲ್ಲ. ನನಗೆ ಭಾಷಣ ಮಾಡಲು ಯಾವ ಕಾರಣವೂ ಕಂಡು ಬರುವುದಿಲ್ಲ.

ಕಾಮ್ರೇಡರೇ, ನಿಮ್ಮ ಮುಂದೆ ಹಲವಾರು ವಿಷಯಗಳ ಬಗ್ಗೆ ಮಾತನಾಡುವ ಮನಸ್ಸಿದ್ದರೂ ಸಹ ನಾನು ನಿಮ್ಮ ವೇಳೆಯನ್ನು ಹೆಚ್ಚಾಗಿ ತೆಗೆದುಕೊಳ್ಳುವುದಿಲ್ಲ. ಈಗ ನಾನು ನಿರುದ್ಯೋಗ ಸಮಸ್ಯೆಯ ಪ್ರಮಾಣದ ಬಗ್ಗೆ ಒತ್ತಿ ಹೇಳಲು ಇಚ್ಛಿಸುತ್ತೇನೆ. ಕಾಮ್ರೇಡರೇ, ನೀವೆಲ್ಲರೂ ಸಹ ವ್ಯಾಸಂಗವನ್ನು ಮುಗಿಸಿದ ನಂತರ ನಿರುದ್ಯೋಗ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ನಮ್ಮೊಳಗಿನ ಕೆಲವು ಕ್ರಾಂತಿಕಾರಿ ಕಾರ್ಯಕರ್ತರನ್ನು ಬಿಟ್ಟು ಕ್ರಾಂತಿಯ ಬೆಂಬಲಿಗರಾಗಿದ್ದರೂ ಈ ಕ್ರಾಂತಿಕಾರಿ ಹೋರಾಟಗಳಲ್ಲಿ ಸಂಪೂರ್ಣವಾಗಿ ತೊಡಗದೆ, ಸಮರ್ಪಿಸಿಕೊಳ್ಳದೇ ಇರುವ ನಮ್ಮ ವಿದ್ಯಾರ್ಥಿ–ಯುವಜನರ ವಿಶಾಲ ಸಮುದಾಯದ ಪ್ರತಿಯೋರ್ವ ಸದಸ್ಯರೂ ಸಹ ಈ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ನಾನು ನಿಖರವಾಗಿ ನಮ್ಮ ವಿದ್ಯಾರ್ಥಿ–ಯುವಜನರ ಬೃಹತ್ ಸಮುದಾಯದ ಆ ಸದಸ್ಯರ ಬಗ್ಗೆಯೇ ಮಾತನಾಡುತ್ತಿದ್ದೇನೆ. ಇದು ಅವರ ಪಾಲಿಗೆ ವಾಸ್ತವವಾದ ಹಾಗೂ ಹೃದಯವಿದ್ರಾವಕವಾದ ಸಮಸ್ಯೆಯಾಗಿದೆ. ವ್ಯಾಸಂಗವನ್ನು ಮುಗಿಸಿದ ನಂತರ ಅವರು ನಿರುದ್ಯೋಗ ಸಮಸ್ಯೆಯ ಆಘಾತವನ್ನು ಎದುರಿಸಲೇಬೇಕು. ಈಗ ವಿದ್ಯಾರ್ಥಿದೆಸೆಯಲ್ಲಿ ಇಂದಿನ ಸಮಾಜದ ಯಾವ ಒಂದು ಅನಿವಾರ್ಯ ಫಲವಾದ ಪಿಡುಗು ಅನೇಕ ಜನರನ್ನು ತಟ್ಟುತ್ತಿಲ್ಲವೋ ಆ ಒಂದು ಪಿಡುಗನ್ನು ಅವರು ಅನುಭವಿಸಲೇಬೇಕಾಗುತ್ತದೆ. ಆದರೆ, ಅವರು ಸಾಂಸಾರಿಕ ಜೀವನವನ್ನು ಪ್ರವೇಶಿಸಿದಾಗ, ಜವಾಬ್ದಾರಿಗಳನ್ನು ಹೊತ್ತುಕೊಂಡಾಗ, ಮದುವೆಯಾಗಿ ಮಕ್ಕಳಾದಾಗ ಅವರು ತಾವು ಎಂತಹ ಸಾಮಾಜಿಕ ಪರಿಸರದಲ್ಲಿ ಬದುಕುತ್ತಿದ್ದೇವೆ ಎಂಬುದನ್ನು ಖಂಡಿತವಾಗಿ ಅರಿಯಲಾರಂಭಿಸುತ್ತಾರೆ. ತಮ್ಮೆಲ್ಲಾ ಕನಸುಗಳು ನುಚ್ಚುನೂರಾಗಿವೆ ಎಂಬುದನ್ನು ಅವರು

ಆಗ ಕಂಡುಕೊಳ್ಳುತ್ತಾರೆ. ಕೇವಲ ತಮ್ಮ ಆಪ್ತೇಷ್ಟರೊಂದಿಗೆ, ಸಮಾಜದಿಂದ ಪ್ರತ್ಯೇಕವಾಗಿ ಬದುಕಲು ಸಾಧ್ಯವಿಲ್ಲ ಎಂಬುದನ್ನು ಅವರು ಆಗ ತಿಳಿದುಕೊಳ್ಳಬಹುದು. ಅವರು ಯಾವುದನ್ನು ಅತ್ಯಂತ ಪವಿತ್ರವೆಂದು, ಗೋಪ್ಯವೆಂದು ಭಾವಿಸುತ್ತಾರೋ ಅಂತಹ ಖಾಸಗಿ ಜೀವನದ ಮೇಲೂ ಸಹ ಅಸ್ತಿತ್ವದಲ್ಲಿರುವ ಸಾಮಾಜಿಕ ಬೇನೆಗಳು ನೇರವಾದ ಪ್ರಭಾವವನ್ನು ಬೀರುತ್ತವೆ. ಸಾಮಾಜಿಕ ಪರಿಸರದಲ್ಲಿ ಅಸ್ತಿತ್ವದಲ್ಲಿರುವ ಬೇನೆಗಳಿಂದ ಅವರು ಗೋಪ್ಯ ಮತ್ತು ಪವಿತ್ರವೆಂದು ಭಾವಿಸುವ ಖಾಸಗೀ ಜೀವನ ಅಧಃಪತನವಾಗದಂತೆ, ಕಲುಷಿತವಾಗದಂತೆ ಉಳಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದು ಅವರಿಗೆ ಆಗ ಮನವರಿಕೆಯಾಗಬಹುದು. ಇದು ಖಂಡಿತವಾಗಿಯೂ ಆಗುತ್ತದೆ. ಬಹುಶಃ ಅವರು ಆಗ ಕಲಿತುಕೊಳ್ಳಬಹುದು. ಆದ್ದರಿಂದ, ಅಂತಹ ನಿಷ್ಪ್ರಯೋಜಕ, ಅಧಃಪತನಕಾರಿ, ಅಪಮಾನಕರ ಮತ್ತು ಪರಾವಲಂಬಿ ರೀತಿಯ ಜೀವನದ ಬಗ್ಗೆ ಕನಸು ಕಾಣದೆ ನಮ್ಮ ಸಮಾಜದಲ್ಲಿ ಮೂಲಭೂತ ಬದಲಾವಣೆಯನ್ನು ತರಲು, ತನ್ಮೂಲಕ ನಮ್ಮ ಸಮಾಜದಲ್ಲಿನ ಎಲ್ಲಾ ವ್ಯಕ್ತಿಗಳ ಮುಕ್ತವಾದ, ವಿಸ್ತಾರವಾದ ಮತ್ತು ತ್ವರಿತವಾದ ಬೆಳವಣಿಗೆಗೆ ಅಂದರೆ ಅವರ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮತ್ತು ನೈತಿಕ ಜೀವನದ ಬೆಳವಣಿಗೆಗೆ ಹಾದಿ ಮಾಡಿಕೊಡಲು ಕ್ರಾಂತಿಕಾರಿ ಹೋರಾಟಗಳಲ್ಲಿ ನಮ್ಮನ್ನೇ ನಾವು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವುದು ಉತ್ತಮವಲ್ಲವೇ? ಇದಕ್ಕಾಗಿ ನೀವು, ವರ್ಗಗಳ ಆಧಾರದ ಮೇಲೆ ಮಾತನಾಡತಕ್ಕಂಥ, ಸಾಮಾಜಿಕ - ಆರ್ಥಿಕ – ರಾಜಕೀಯ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಯನ್ನು ನೀವು ತರಲಿಚ್ಛಿಸಿದಲ್ಲಿ, ನಮ್ಮ ಹೋರಾಟದ ಸಾಮರ್ಥ್ಯದೊಂದಿಗೆ ಸಂಶೋಧನಾತ್ಮಕ ಮನಸ್ಸಿರಬೇಕು ಎಂದೂ, ಜನತೆಯಿಂದ ಸತತವಾಗಿ ಮತ್ತು ಅವಿರತವಾಗಿ ಕಲಿಯುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು ಎಂದೂ ಬೋಧಿಸುವ ಕ್ರಾಂತಿಕಾರಿ ವೈಚಾರಿಕತೆಯಾದ ಮಾರ್ಕ್ಸ್‌ವಾದ–ಲೆನಿನ್‌ವಾದಕ್ಕೆ, ವೈಜ್ಞಾನಿಕ ಸಮಾಜವಾದಕ್ಕೆ ನೀವು ಬದ್ಧರಾಗಬೇಕು. ಈ ರೀತಿಯಾಗಿ, ಸಮಸ್ಯೆಗಳ ಬಗ್ಗೆ ಸಾಧ್ಯಂತವಾಗಿ ತಿಳಿದುಕೊಳ್ಳುತ್ತಾ, ನಮ್ಮ ವಿಚಾರಗಳಿಗೆ ಸರಿಯಾದ ಆಕಾರ ಕೊಡುತ್ತಾ, ನೀವು ಸರಿಯಾದ ಹಾದಿಯನ್ನು, ಸರಿಯಾದ ಮಾರ್ಗವನ್ನು ಕಂಡು ಹಿಡಿಯಲು ಶಕ್ತರಾಗುತ್ತೀರಿ. ಆದ್ದರಿಂದಲೇ, ಮಾರ್ಕ್ಸ್ ಇಡಿಯ ವಿಶ್ವದ ಶೋಷಿತ–ಮರ್ದಿತ ಮತ್ತು ತುಳಿತಕ್ಕೊಳಗಾದ ಜನತೆಗೆ ಇಂತೆಂದರು : ಚಿಂತಿಸಬೇಡಿ, ಬಂಡವಾಳಶಾಹಿಗಳಲ್ಲಿ, ಬಂಡವಾಳಶಾಹಿ ಆಳ್ವಿಕರಲ್ಲಿ ಶಸ್ತ್ರಗಳು, ಬಂದೂಕುಗಳು, ಫಿರಂಗಿಗಳು ಇರಬಹುದು, ಅವರಲ್ಲಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದ ಸೈನ್ಯವಿರಬಹುದು. ಆದರೆ ದ್ವಂದ್ವಾತ್ಮಕ ವಸ್ತುವಾದ – ಒಂದು ವಿಜ್ಞಾನ – ನಿಮ್ಮ ಕೈಯಲ್ಲಿದೆ, ಅದು ಎಂತಹ ಶಕ್ತಿಯುತ ಅಸ್ತ್ರವೆಂದರೆ, ಅದನ್ನು ಸರಿಯಾಗಿ ಅರ್ಥಮಾಡಿಕೊಂಡು, ಅಳವಡಿಸಿಕೊಂಡರೆ, ಅದು ಒಂದು ಅಜೇಯ ಶಕ್ತಿಗೆ ಜನ್ಮ ನೀಡಬಲ್ಲದು. ನೀವು ಮಾರ್ಕ್ಸ್‌ವಾದ – ಲೆನಿನ್‌ವಾದವನ್ನು

ಗಾಢವಾಗಿ ಕಲಿಯಲಿಕ್ಕಾದರೆ ಮತ್ತು ಅದನ್ನು ಆಚರಣೆಯಲ್ಲಿ ಸರಿಯಾಗಿ ಅಳವಡಿಸಿಕೊಳ್ಳಲು ಶಕ್ತಿಯುತರಾದರೆ ಆಗ ಮತ್ತು ಆಗ ಮಾತ್ರ ನೀವು ಕ್ರಾಂತಿಯನ್ನು ಸರಿಯಾಗಿ ಗ್ರಹಿಸಿಕೊಳ್ಳಬಲ್ಲಿರಿ, ನೀವು ಸಮಾಜದ ಬೆಳವಣಿಗೆಯ ಪ್ರಕ್ರಿಯೆಯನ್ನು ಗ್ರಹಿಸಿಕೊಳ್ಳಬಲ್ಲಿರಿ. ಸಮಾಜದ ಬೆಳವಣಿಗೆಯನ್ನು ನಿರ್ದೇಶಿಸುವ ಶಕ್ತಿಗಳ ಎಲ್ಲ ಚಟುವಟಿಕೆಗಳನ್ನು ನಿಯಂತ್ರಿಸುವ ಅಂತರ್ಗತ ನಿಯಮವನ್ನು ನಮಗೆ ಕಂಡುಕೊಳ್ಳಲಾದರೆ ಅಂದರೆ ವರ್ಗಹೋರಾಟದ ಬೆಳವಣಿಗೆಯ ನಿಯಮವನ್ನು ನೀವು ಅರಿತುಕೊಳ್ಳಲಾದರೆ, ನೀವು ಅಜೇಯ ಶಕ್ತಿಯನ್ನು ಹೊಂದುತ್ತೀರಿ ಮತ್ತು ಅಂತಿಮವಾಗಿ ನೀವು ಆಧುನಿಕ ಜಗತ್ತನ್ನು ಗೆದ್ದ ಧೀರರಾಗುತ್ತೀರಿ. ನಿಜ, ನೀವು ವಿಜ್ಞಾನವಾದಂತಹ ಮಾರ್ಕ್ಸ್‌ವಾದ–ಲೆನಿನ್‌ವಾದದ ಮೇಲೆ ಪ್ರಭುತ್ವವನ್ನು ಸಾಧಿಸಿಕೊಂಡಲ್ಲಿ, ನೀವು ಜಗತ್ತನ್ನೇ ಗೆಲ್ಲಬಹುದು. ಈ ವಿಜ್ಞಾನದೊಂದಿಗೆ ಯಾವ ಶಕ್ತಿಗಳೂ ಸಹ ಸ್ಪರ್ಧಿಸಲು ಸಾಧ್ಯವಿಲ್ಲ. ಇದು ಕಾರ್ಮಿಕವರ್ಗದ, ಜನತೆಯ ಮತ್ತು ದುಡಿಯುವ ಜನತೆಯ ಕೈಯಲ್ಲಿನ ಒಂದು ನಿರ್ಣಾಯಕ ಅಸ್ತ್ರ. ಆದ್ದರಿಂದ ಈಗ ಅತ್ಯಂತ ತುರ್ತಾಗಿ ಬೇಕಾಗಿರುವುದು ಏನೆಂದರೆ, ಸಮಾಜದ ಬೆಳವಣಿಗೆಯ ಇಡಿಯ ಗತಿಯನ್ನು ನಿರ್ದೇಶಿಸುವ, ಅಂತರ್ಗತ ನಿಯಮಗಳನ್ನು ಕಾಣಬಲ್ಲಂತಹ ಶಕ್ತಿಯನ್ನು ನೀಡಬಲ್ಲ, ಸೃಜನಶೀಲವೂ ಮತ್ತು ನಿರ್ಣಾಯಕವೂ ಆದ ಜ್ಞಾನವನ್ನು ಪಡೆದುಕೊಳ್ಳುವುದು. ಈ ರೀತಿಯಾಗಿ, ಜನತೆಯ ಹೋರಾಟಗಳೊಂದಿಗೆ ಮತ್ತು ಇತರ ದೈನಂದಿನ ರಾಜಕೀಯ ಕಾರ್ಯಗಳೊಂದಿಗೆ ನಮ್ಮನ್ನೇ ತೊಡಗಿಸಿಕೊಳ್ಳುವಾಗ, ನೀವು ರಾಜಕೀಯವಾಗಿ ಮತ್ತು ವೈಚಾರಿಕವಾಗಿ ನಿಮ್ಮನ್ನೇ ಸಜ್ಜು ಮಾಡಿಕೊಳ್ಳಲಾದರೆ, ಆಗ ಮಾತ್ರ ನೀವು ವಿಶಿಷ್ಟ ವರ್ಗ ಹೋರಾಟಗಳನ್ನು ನಿಯಂತ್ರಿಸುತ್ತಿರುವ ನಿರ್ದಿಷ್ಟ ನಿಯಮಗಳನ್ನು ಮತ್ತು ಒಂದು ಸಮಾಜದ ವಿಶಿಷ್ಟ ಪರಿಸರದಲ್ಲಿ ಕಾಣಿಸಿಕೊಳ್ಳುತ್ತಿರುವ, ಬೆಳೆಯುತ್ತಿರುವ ಆ ನಿಯಮಗಳ ಎಲ್ಲಾ ವಿಶೇಷತೆಗಳನ್ನು ಅರಿಯಬಹುದು.

ಆದ್ದರಿಂದ, ಮಾರ್ಕ್ಸ್‌ವಾದ – ಲೆನಿನ್‌ವಾದ ಒಂದು ವಿಜ್ಞಾನ. ನೀವು ಅದನ್ನು ಜಾಗರೂಕತೆಯಿಂದ ಮತ್ತೆ ಮತ್ತೆ ಅಭ್ಯಾಸ ಮಾಡಬೇಕು. ಅದನ್ನು ಆಚರಣೆಯಲ್ಲಿ ಅಳವಡಿಸಿಕೊಳ್ಳುವಂತೆ ಅಭ್ಯಾಸ ಮಾಡಬೇಕು. ಅದನ್ನು ಜನತೆಗೆ ತಲುಪಿಸಲಾಗುವಂತೆ ಅಭ್ಯಾಸ ಮಾಡಬೇಕು. ಕೇವಲ ಪುಸ್ತಕ ಬರೆಯಲು ಅಲ್ಲ ಮತ್ತು ಖಂಡಿತವಾಗಿ ನಮ್ಮ ಇಚ್ಛೆಗನುಸಾರವಾಗಿ ಉಲ್ಲೇಖಿಸಲು ಅಲ್ಲ. ಯಾವುದೇ ವಿಷಯವನ್ನು ಅರ್ಥಮಾಡಿಕೊಳ್ಳುವುದು ಮತ್ತು ಮೈಗೂಡಿಸಿಕೊಳ್ಳುವುದು ಭಿನ್ನವಾದ ಸಂಗತಿಗಳೆಂಬುದನ್ನು ಮಾರ್ಕ್ಸ್‌ವಾದ ನಮಗೆ ಬೋಧಿಸುತ್ತದೆ. ನೀವು ಮಾರ್ಕ್ಸ್‌ವಾದ – ಲೆನಿನ್‌ವಾದವನ್ನು ಮೈಗೂಡಿಸಿಕೊಳ್ಳಲು ಸಾಧ್ಯವಾದರೆ ಅದನ್ನು ಜನತೆಯ ಮುಂದೆ ಅತಿ ಸರಳವಾದ ರೀತಿಯಲ್ಲಿ ಮಂಡಿಸಬಹುದು ಮತ್ತು ಅದನ್ನು ಜನತೆ ಸುಲಭವಾಗಿ ಅರ್ಥ ಮಾಡಿಕೊಳ್ಳುವರೆಂಬುದನ್ನು ನೀವೇ ನೋಡುತ್ತೀರಿ.

ಮಾರ್ಕ್ಸ್‌ವಾದ ಜೀವನದ ತತ್ವಶಾಸ್ತ್ರ; ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಅನಕ್ಷರಸ್ಥ ರೈತರು ಮತ್ತು ಕಾರ್ಮಿಕರೊಂದಿಗೆ ಬಹಳಷ್ಟು ಅಧ್ಯಯನ ತರಗತಿಗಳನ್ನು ನಡೆಸಿದ್ದೇನೆ, ನನ್ನ ಅನುಭವವೇನೆಂದರೆ ಮಾರ್ಕ್ಸ್‌ವಾದ–ಲೆನಿನ್‌ವಾದದ ಬಗ್ಗೆ, ದ್ವಂದ್ವಾತ್ಮಕ ವಸ್ತುವಾದದ ಬಗ್ಗೆ, ಕಡೆಗೆ ವಿಜ್ಞಾನದ ಅತ್ಯಂತ ಸೂಕ್ಷ್ಮವಾದ ಸಮಸ್ಯೆಗಳ ಬಗ್ಗೆ ರೈತರಿಗೆ ಸಹ ಅರ್ಥವಾಗುವಂತಹ ಭಾಷೆಯಲ್ಲಿ ಮತ್ತು ಶೈಲಿಯಲ್ಲಿ ಮಾತನಾಡಿದರೆ ಆಗ ರೈತರು ಮತ್ತು ಕಾರ್ಮಿಕರು ಅನಕ್ಷರಸ್ಥರಾಗಿದ್ದರೂ, ಬುದ್ಧಿಜೀವಿಗಳೆನಿಸಿಕೊಂಡ ವ್ಯಕ್ತಿಗಳಿಗಿಂತ ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾರೆ. ಇದು ನನ್ನ ಸ್ವಂತ ಅನುಭವ. ಏಕೆಂದರೆ ನಾನೇ ಸ್ವತಃ ಗ್ರಾಮೀಣ ಪ್ರದೇಶಗಳಲ್ಲಿ, ನಗರ ಪ್ರದೇಶಗಳಲ್ಲಿ ಈ ಚರ್ಚೆಗಳನ್ನು ನಡೆಸುತ್ತೇನೆ. ಆದ್ದರಿಂದಲೇ, ಮಾರ್ಕ್ಸ್‌ವಾದವು ಅನಕ್ಷರಸ್ಥ ಜನತೆಗೆ, ತುಳಿತಕ್ಕೊಳಪಟ್ಟ ಜನತೆಗೆ ಗ್ರಹಿಸಲಾಗದಷ್ಟು ಅರ್ಥ ಮಾಡಿಕೊಳ್ಳಲಾಗದಷ್ಟು ಮತ್ತು ಮೈಗೂಡಿಸಿಕೊಳ್ಳಲಾಗದಷ್ಟು ಕಠಿಣ ವಿಷಯವೆಂದು ನಾನು ನಂಬುವುದಿಲ್ಲ. ಬದಲಿಗೆ, ಇದು ಜೀವನದ ತತ್ವ ಶಾಸ್ತ್ರವೆಂಬುದನ್ನು ಯಾವಾಗಲೂ ಮನದಲ್ಲಿಟ್ಟುಕೊಳ್ಳಬೇಕು ಮತ್ತು ವಾಸ್ತವವಾಗಿ ಇಂದು, ಅದು ಕಾರ್ಮಿಕ ವರ್ಗದ ತುಳಿತಕ್ಕೊಳಪಟ್ಟ ಜನತೆಯ ಮತ್ತು ಅನಕ್ಷರಸ್ಥ ಜನತೆಯ ತತ್ವಜ್ಞಾನವಾಗಿದೆ; ಅವರ ಬಳಿ ಇದನ್ನು ತೆಗೆದುಕೊಂಡು ಹೋಗಿ, ಅವರ ಮುಂದಿಟ್ಟರೆ, ಅವರಿಗೆ ಅರ್ಥವಾಗುವ ಭಾಷೆ ಮತ್ತು ಶೈಲಿಯಲ್ಲಿ ಹೇಳಿದರೆ ಆಗ ಜನತೆ ಅದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾರೆ. ಆದ್ದರಿಂದ, ಈ ಸಮ್ಮೇಳನದಿಂದ ಹಿಂದಿರುಗಿದ ನಂತರ, ನೀವು ಪ್ರತಿಯೊಬ್ಬರೂ ವೈಯಕ್ತಿಕವಾಗಿ ಮತ್ತು ನೀವೆಲ್ಲರೂ ಸಾಮೂಹಿಕವಾಗಿ, ಅರ್ಥಾತ್, ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಸಂಕಲ್ಪ ಕೈಗೊಂಡರೆ, ನಮ್ಮ ರಾಜಕೀಯ ಚಳುವಳಿಯ ಇತಿಹಾಸವು ಖಂಡಿತವಾಗಿ ಹೊಸ ತಿರುವನ್ನೇ ಪಡೆದುಕೊಳ್ಳುತ್ತದೆ ಎಂದು ನಾನು ದೃಢವಾಗಿ ನಂಬುತ್ತೇನೆ. ಈ ಸಭಾಂಗಣದತ್ತ ಒಮ್ಮೆ ನೋಡಿ. ನೀವು ಅದೆಷ್ಟು ಮಂದಿ ಯುವಜನರು ನೆರೆದಿದ್ದೀರಿ. ನೀವು ಮುನ್ನುಗ್ಗಲು ದೃಢ ನಿರ್ಧಾರ ಹೊಂದಿದ್ದರೆ, ಹೋರಾಟಗಳ ಎಲ್ಲಾ ಹೊಣೆಗಾರಿಕೆ ಮತ್ತು ನೋವನ್ನು ಭರಿಸಲು ಸಿದ್ಧರಾದರೆ, ನೀವು ಖಂಡಿತವಾಗಿ ಇಂದಿನ ಸಂದಿಗ್ಧ ಸನ್ನಿವೇಶದಲ್ಲೂ ಸಹ ಮುನ್ನಡೆಯನ್ನು ಸಾಧಿಸಬಹುದು.

ಕಾಮ್ರೇಡರೇ, ನೆನಪಿಡಿ, ವೈಚಾರಿಕತೆ ಮತ್ತು ವಿಚಾರಕ್ಕಾಗಿ ಆರಂಭದ ಹಂತದಲ್ಲಿ ತ್ಯಾಗ ಮಾಡಬಲ್ಲವರು ಬಹು ಸಂಖ್ಯೆಯಲ್ಲಿರುವುದಿಲ್ಲ, ಅವರು ಎಂದಿಗೂ ಕೆಲವರೇ–ತರುಣರು. ಉಜ್ವಲ ವ್ಯಕ್ತಿತ್ವವುಳ್ಳವರು ಮತ್ತು ವಿದ್ಯಾರ್ಥಿಗಳು. ಸಮಾಜದ ಬೆಳವಣಿಗೆಯ ಪ್ರತಿಯೊಂದು ಹಂತದಲ್ಲೂ, ಪ್ರತಿಯೊಂದು ದೇಶದಲ್ಲೂ, ಕ್ರಾಂತಿಕಾರಿ ವೈಚಾರಿಕತೆಯಿಂದ ಪ್ರಭಾವಿತರಾಗಿ,

ಸ್ಫೂರ್ತಿಹೊಂದಿ ಮುಂದಡಿ ಇಡುವವರು, ಸಂಪೂರ್ಣ ಸಮರ್ಪಣಾ ಮನೋಭಾವವನ್ನು ಹೊಂದಿ ಜನತೆಯ ಬಳಿ ಹೋಗುವವರು, ಜನತೆಯನ್ನು ಜಾಗೃತಗೊಳಿಸುವವರು, ಅವರನ್ನು ಸಹಸ್ರಾರು ಸಂಖ್ಯೆಯಲ್ಲಿ ಸಂಘಟಿಸಿ ಅವರ ರಾಜಕೀಯ ಶಕ್ತಿಯನ್ನು ಸೃಷ್ಟಿಸುವಲ್ಲಿ ಸಹಾಯಕವಾಗುವವರು ವಿದ್ಯಾರ್ಥಿಗಳು ಹಾಗೂ ಯುವಜನರು. ನಂತರ ಜನತೆಯ ಕ್ರಿಯೆಗೆ ಕಾಲ ಬರುತ್ತದೆ; ಅದನ್ನೇ ನಾವು ಕ್ರಾಂತಿ ಎನ್ನುತ್ತೇವೆ. ಅದಕ್ಕೂ ಮೊದಲು ನೀವು ಕಠಿಣವಾದ ಮತ್ತು ಯಾತನಾಮಯವಾದ ಹಾದಿಯಲ್ಲಿ ನಡೆಯಬೇಕಾಗುತ್ತದೆ, ಆ ಹಾದಿ ನೋವಿನಿಂದ ಕೂಡಿದ್ದರೂ ಸಂತೋಷಕರವಾದದ್ದು. ಇದು ಸಂತೋಷಕರ ಮತ್ತು ಗೌರವದ ಹಾದಿ ಎಂದು ನಾನು ಹೇಳುತ್ತೇನೆ. ನಿಜ, ಈ ಹೋರಾಟದ ಹಾದಿ ನೋವಿನಿಂದ ಕೂಡಿರಬಹುದು, ಕೆಲವೊಮ್ಮೆ ಯಾತನಾಮಯವಾಗಬಹುದು ಸಹ, ಆದರೆ ಇದು ಗೌರವಯುತವಾಗಿ ಜೀವನವನ್ನು ನಡೆಸುವ ಹಾದಿ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಈ ಹೋರಾಟದಲ್ಲಿ ನೀವು ಮರಣ ಹೊಂದಬಹುದು, ಆದರೆ ನೀವು ಗೌರವದಿಂದ ತಲೆಯನ್ನೆತ್ತಿ ಮರಣವನ್ನಪ್ಪುತ್ತೀರಿ. ಹಾದಿ ಬೀದಿಗಳಲ್ಲಿ ಬೆಕ್ಕು, ನಾಯಿಗಳಂತೆ ಕೊಳೆಯುತ್ತಾ ನಿಮ್ಮನ್ನೆ ನೀವು ಅಪಮಾನಕ್ಕೊಳಪಡಿಸಿಕೊಳ್ಳುತ್ತಾ ಮರಣ ಹೊಂದಬೇಡಿ. ನೆನಪಿಡಿ. ನಾವೆಲ್ಲರೂ ಮರಣ ಹೊಂದತಕ್ಕವರೇ. ಆದ್ದರಿಂದ ಸಾವನ್ನಪ್ಪುವುದಾದರೆ ಬೇಡುತ್ತಾ ಪ್ರಾಣ ಬಿಡಬೇಡಿ, ನಿಮ್ಮನ್ನು ನೀವೇ ಅಪಮಾನಕ್ಕೀಡುಮಾಡಿಕೊಳ್ಳುತ್ತಾ ಮಡಿಯಬೇಡಿ. ಮರಣವನ್ನಪ್ಪುವಾಗ ಘನತೆಯಿಂದ ಮರಣವನ್ನಪ್ಪಿ ಮತ್ತು ಗೌರವದಿಂದ ಬದುಕಿ ಜೀವತ್ಯಾಗ ಮಾಡಲು ನಿಮಗೆ ಇರುವ ಒಂದೇ ಒಂದು ಖಚಿತ ಮಾರ್ಗವೆಂದರೆ, ಸಮಾಜದ ಕ್ರಾಂತಿಕಾರಿ ಬದಲಾವಣೆಗಾಗಿ ನಡೆಯುವ ಜನಸಮುದಾಯದ ಕ್ರಾಂತಿಕಾರಿ ಹೋರಾಟದಲ್ಲಿ ನಿಮ್ಮನ್ನೇ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು; ಈ ಧ್ಯೇಯಕ್ಕಾಗಿ ನೀವು ಸಹಸ್ರ ಸಂಖ್ಯೆಯಲ್ಲಿ ಸಂಘಟಿತರಾಗಿ ಒಗ್ಗೂಡಬೇಕು.

ಕಾಮ್ರೇಡರೇ, ಜನ ಸಮುದಾಯದ ಎಲ್ಲಾ ನ್ಯಾಯಯುತ ಹೋರಾಟಗಳಲ್ಲಿ ವೈಯಕ್ತಿಕವಾಗಿಯೂ ಮತ್ತು ಸಾಮೂಹಿಕವಾಗಿಯೂ ನಿಮ್ಮನ್ನೇ ನೀವು ತೊಡಗಿಸಿಕೊಳ್ಳಿ, ಸಕ್ರಿಯವಾಗಿ ಪಾತ್ರವಹಿಸಿ ಮತ್ತು ನಿಮ್ಮ ರಾಜಕೀಯ ಕ್ರಿಯಾ ಸ್ಫೂರ್ತಿಯನ್ನು ಮುಂದಿರಿಸಿಕೊಳ್ಳಿ, ಜನತೆಯ ಬಳಿಗೆ ಹೋಗುವುದು, ಅವರನ್ನು ಸಂಘಟಿಸುವುದು, ದುಡಿಯುವ ಜನತೆ ಶಸ್ತ್ರಾಸ್ತ್ರಗಳನ್ನು ಹಿಡಿದು ಬಂಡವಾಳಶಾಹಿಗಳನ್ನು ಅಧಿಕಾರದಿಂದ ಕಿತ್ತೊಗೆದು ನಮ್ಮ ಸಮಾಜದಲ್ಲಿ ಮೂಲಭೂತ ಬದಲಾವಣೆಯನ್ನು ತರಲು, ಅಂದರೆ, ಬಂಡವಾಳವಾದವನ್ನು ಕಿತ್ತೊಗೆದು, ಸಮಾಜವಾದವನ್ನು ಸ್ಥಾಪಿಸಲು ಅವಶ್ಯವಾದ ರಾಜಕೀಯ ಶಕ್ತಿಯನ್ನು ಸೃಷ್ಟಿಸಲು ಸಹಾಯ ಮಾಡುವುದು ನಿಮ್ಮ ಘೋಷಣೆಯಾಗಬೇಕು.

ನಿಮ್ಮೆಲ್ಲರಿಗೂ ನನ್ನ ಶುಭ ಹಾರೈಕೆಗಳು. ನಿಮ್ಮೆಲ್ಲರಿಗೂ ಕ್ರಾಂತಿಕಾರಿ ಶುಭಾಶಯಗಳನ್ನು ಕೋರುತ್ತಾ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಕ್ರಾಂತಿ ಚಿರಾಯುವಾಗಲಿ !**

**ಮಾರ್ಕ್ಸ್‌ವಾದ–ಲೆನಿನ್‌ವಾದ ಚಿರಾಯುವಾಗಲಿ !**

# ನಮ್ಮ ಶೈಕ್ಷಣಿಕ–ಸಾಂಸ್ಕೃತಿಕ ಸಮಸ್ಯೆಗಳಿಗೆ ಒಂದು ವೈಜ್ಞಾನಿಕ ದೃಷ್ಟಿಕೋನ

ಶ್ರೀಯುತ ವಿಶ್ವನಾಥ್ ಪ್ರಸಾದ್ ಸಿಂಗ್‌ರವರು ನಮ್ಮ ದೇಶದ ಇಂದಿನ ಶಿಕ್ಷಣ ಪದ್ಧತಿಯ ಬಗ್ಗೆ ಬರೆದಿರುವ ಈ ಪುಟ್ಟದಾದರೂ ವಿಚಾರಪೂರ್ಣವಾದ ಪುಸ್ತಕಕ್ಕೆ ಮುನ್ನುಡಿ ಬರೆಯಲು ನನಗೆ ಹರ್ಷವೆನಿಸುತ್ತದೆ. ಸಮಾಜ ವಿಜ್ಞಾನದ ವಿದ್ಯಾರ್ಥಿಯಾದ ನನಗೆ, ವರ್ಗ ವಿಭಜಿತ ಸಮಾಜದಲ್ಲಿ ಶಿಕ್ಷಣ ಮತ್ತು ಶೈಕ್ಷಣಿಕ ಪದ್ಧತಿಯು ವರ್ಗ ಪೂರ್ವಕಲ್ಪನೆಗಳಿಂದ ಎಂದಿಗೂ ಮುಕ್ತವಾಗಿರುವುದಿಲ್ಲ ಎಂಬುದನ್ನು ಒಪ್ಪದೆ ಇರಲು ಸಾಧ್ಯವಿಲ್ಲ. ಸಮಾಜ ಬೆಳವಣಿಗೆಯ ಒಂದು ನಿರ್ದಿಷ್ಟ ಹಂತದಲ್ಲಿ ಅದರ ಆರ್ಥಿಕತೆಯು ಆ ಸಮಾಜ ವ್ಯವಸ್ಥೆಯ ಬುನಾದಿಯಾಗಿದ್ದು, ಪ್ರತಿಯೊಂದು ಸಮಾಜದ ಮೇಲ್‌ರಚನೆ(Superstructure)ಯು ಅದರ ತಳಹದಿ(Basis)ಗನುಗುಣವಾಗಿ ಇರುತ್ತದೆ ಎಂಬುದು ಸಮಾಜ ವಿಜ್ಞಾನದ ವಿದ್ಯಾರ್ಥಿಗಳಿಗೆ ಗೊತ್ತು. ಮೇಲ್‌ರಚನೆ ಎಂದರೆ ರಾಜಕೀಯ, ನ್ಯಾಯಶಾಸ್ತ್ರ, ತತ್ವಶಾಸ್ತ್ರ, ನೀತಿ–ನೈತಿಕತೆ, ಕಲಾತ್ಮಕತೆಯ ಕುರಿತಾದ ಧೋರಣೆಗಳು ಮತ್ತು ಅವುಗಳಿಗೆ ಅನುಗುಣವಾದ ಸಂಸ್ಥೆಗಳು. ಜೊತೆಗೆ, ಮೇಲ್‌ರಚನೆ ಎನ್ನುವುದು ತಳಹದಿಯೊಂದಿಗೆ ತಟಸ್ಥವಾಗಿರುವ ಅಥವಾ ನಿರ್ವಿಕಾರವಾಗಿರುವ, ನಿಷ್ಕ್ರಿಯವಾಗಿರುವ ಶಕ್ತಿಯಲ್ಲ. ಬದಲಿಗೆ ಅದು ತಳಹದಿಯು ಅಸ್ತಿತ್ವಕ್ಕೆ ಬರಲು, ಸದೃಢಗೊಳ್ಳಲು ಮತ್ತು ಗಟ್ಟಿಯಾಗಲು ಸದಾ ನೆರವಾಗುವ ಅತ್ಯಂತ ಕ್ರಿಯಾಶೀಲವಾದ ಶಕ್ತಿ.

ಶಿಕ್ಷಣ ಪದ್ಧತಿಯು ಒಂದು ನಿರ್ದಿಷ್ಟ ಆರ್ಥಿಕ ತಳಹದಿಯ ಮೇಲ್‌ರಚನೆಯಾಗಿರುವುದರಿಂದ, ವರ್ಗ ವಿಭಜಿತ ಸಮಾಜದಲ್ಲಿ ಅದರ ಪಾತ್ರವು ತಟಸ್ಥವಾಗಿರುವುದಿಲ್ಲ, ವರ್ಗಾತೀತವಾಗಿರುವುದಿಲ್ಲ. ಆರ್ಥಿಕ ಬುನಾದಿಯ ಮೇಲ್‌ರಚನೆಯಾಗಿರುವುದರಿಂದಲೇ ಅದು, ಸಮಾಜದ ಭೌತಿಕ ಉತ್ಪಾದನೆಯನ್ನು ಅದರಿಂದಾಗಿ ಬೌದ್ಧಿಕ ಉತ್ಪಾದನೆಯನ್ನು ನಿಯಂತ್ರಿಸುವ ಆಳುವ ವರ್ಗದ ಹಿತವನ್ನು ಕಾಪಾಡುತ್ತದೆ.

ನಮ್ಮದು ಒಂದು ವರ್ಗ ವಿಭಜಿತ ಸಮಾಜ. ಯಾರಾದರೂ ಒಪ್ಪಲಿ ಅಥವಾ ಬಿಡಲಿ, ಇದು ನಮ್ಮ ಇಷ್ಟಾನಿಷ್ಟಗಳಿಂದ ಸ್ವತಂತ್ರವಾಗಿ ಅಸ್ತಿತ್ವದಲ್ಲಿರುವ ಕಣ್ಣಿಗೆ ರಾಚುವಂತಹ ವಾಸ್ತವತೆ. ಐತಿಹಾಸಿಕವಾಗಿ ಒಂದಕ್ಕೊಂದು ವಿರುದ್ಧವಾಗಿ ನಿಂತಿರುವ ಎರಡು ವರ್ಗಗಳ ಹಿತಾಸಕ್ತಿಗಳನ್ನೂ ಏಕಕಾಲದಲ್ಲಿ ಕಾಪಾಡುತ್ತಾ, ಎಲ್ಲಾ ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಒಂದೇ ದೃಷ್ಟಿಕೋನವನ್ನು ಹೊಂದಿರಲು ಸಾಧ್ಯವಿಲ್ಲ. ಇಂತಹ ಪರಿಸ್ಥಿತಿಯಲ್ಲಿ, ಶೈಕ್ಷಣಿಕ ವ್ಯವಸ್ಥೆ ಮತ್ತು ಶಿಕ್ಷಣ ವಿಧಾನಗಳನ್ನು ಕುರಿತು ಎರಡು ದೃಷ್ಟಿಕೋನಗಳು, ಎರಡು ಧ್ಯೇಯಗಳು ಮತ್ತು ಎರಡು ಉದ್ದೇಶಗಳು ಮಾತ್ರ ಇರಲು ಸಾಧ್ಯ – ಒಂದು, ಆಳುವ ಬಂಡವಾಳಶಾಹಿ ವರ್ಗದ

ರಾಜಕೀಯ, ವೈಚಾರಿಕತೆ ಮತ್ತು ಹಿತಾಸಕ್ತಿಯನ್ನು ಕಾಪಾಡಿದರೆ, ಇನ್ನೊಂದು, ದುಡಿಯುವ ಜನತೆಯ ರಾಜಕೀಯ, ವೈಚಾರಿಕತೆ ಮತ್ತು ಕ್ರಾಂತಿಕಾರಿ ಹೋರಾಟದ ಹಿತಾಸಕ್ತಿಯನ್ನು ಕಾಪಾಡುತ್ತದೆ. ದುಡಿಯುವ ಜನತೆಯ ಪರವಾಗಿ ನಿಲ್ಲುತ್ತೇವೆ ಮತ್ತು ಜನತೆಯ ಪರವಾಗಿ ಆಲೋಚಿಸುತ್ತೇವೆ ಎಂದು ಯಾರೇ ಆಗಲಿ, ಹೇಳಿಕೊಳ್ಳುವುದಾದರೆ ಅವರು ಕಾರ್ಮಿಕ ವರ್ಗದ ರಾಜಕೀಯಕ್ಕೆ, ವೈಚಾರಿಕತೆಗೆ ಮತ್ತು ಹಿತಾಸಕ್ತಿಗೆ ಪೂರಕವಾಗಬಹುದಾದ ದೃಷ್ಟಿಕೋನವನ್ನೇ ಶೈಕ್ಷಣಿಕ ವ್ಯವಸ್ಥೆಯ ಬಗ್ಗೆಯೂ ಹೊಂದಿರಬೇಕು.

ಆದ್ದರಿಂದಲೇ, ನಮ್ಮ ಸಮಾಜದಂತಹ ಒಂದು ಬಂಡವಾಳಶಾಹಿ ಸಮಾಜದೊಳಗೆ, ಈಗಾಗಲೇ ಅಸ್ತಿತ್ವಕ್ಕೆ ಬಂದು ನೆಲೆಯೂರಿರುವ ಪ್ರಧಾನ ಶೈಕ್ಷಣಿಕ ವಿಚಾರಗಳು, ಶೈಕ್ಷಣಿಕ ವ್ಯವಸ್ಥೆ ಮತ್ತು ಶೈಕ್ಷಣಿಕ ಸಂಸ್ಥೆಗಳು, ನಮ್ಮ ಸಮಾಜದಲ್ಲಿ ನಿರಂತರವಾಗಿ ನಡೆಯುತ್ತಿರುವ ವಿವಿಧ ವರ್ಗಗಳ ಮಧ್ಯದ ಹೋರಾಟದಲ್ಲಿ ತಟಸ್ಥವಾಗಿಲ್ಲ; ಅಥವಾ ಕೆಲವು ಒಣಪಂಡಿತರು ಪ್ರಚಾರ ಮಾಡುವಂತೆ, ಅವು ಜನತೆಯ ನಡುವೆ 'ಶುದ್ಧ ಜ್ಞಾನ'ವನ್ನು ಬೆಳೆಸಲು ಅಸ್ತಿತ್ವಕ್ಕೆ ಬಂದಿರುವ ವರ್ಗಾತೀತ ಸಲಕರಣೆಗಳೂ ಅಲ್ಲ. ಇವು ಕಾರ್ಮಿಕ ವರ್ಗ ಮತ್ತಿತರ ಶೋಷಿತ ಜನ ಸಮುದಾಯದ ಆಲೋಚನಾ ವಿಧಾನ ಮತ್ತು ಕ್ರಾಂತಿಕಾರಿ ವೈಚಾರಿಕತೆಗಳ ಮೇಲೆ ದಾಳಿ ನಡೆಸಲಿಕ್ಕಾಗಿ ಆಳುವ ಬಂಡವಾಳಿಗರ ಕೈಯಲ್ಲಿರುವ ಖಚಿತವಾದ ವರ್ಗ ಸಲಕರಣೆಗಳಾಗಿವೆ.

ಆದ್ದರಿಂದ ಈ ಪುಸ್ತಕದಲ್ಲಿ ಲೇಖಕರು ಪ್ರತಿಪಾದಿಸಿರುವ ಶಿಕ್ಷಣದ ಪದ್ಧತಿ, ಧ್ಯೇಯ ಮತ್ತು ಮಾದರಿಗಳನ್ನು ಸಾಧಿಸುವುದು ನಮ್ಮ ದೇಶದ ಪ್ರಸಕ್ತ ಸಾಮಾಜಿಕ ವ್ಯವಸ್ಥೆಯಲ್ಲಿ ಅಸಾಧ್ಯ. ಅವುಗಳನ್ನು ರಾಷ್ಟ್ರೀಯ ದಬ್ಬಾಳಿಕೆ ಇರದಂತಹ ಮತ್ತು ಮಾನವನಿಂದ ಮಾನವನ ಶೋಷಣೆಯೇ ಇಲ್ಲದ ಸಮಾಜವಾದದಲ್ಲಿ ಮಾತ್ರ ಸಾಧಿಸಬಹುದು.

ಇದರರ್ಥ, ಸಮಾಜವಾದವನ್ನು ಸಾಧಿಸುವವರೆವಿಗೂ ಪ್ರಸಕ್ತ ಶೈಕ್ಷಣಿಕ ವ್ಯವಸ್ಥೆಯಲ್ಲಿ ಸುಧಾರಣೆಯನ್ನು ತರಲು ಯಾವುದೇ ಗಂಭೀರ ಪ್ರಯತ್ನವನ್ನು ಮಾಡದೆ ನಾವು ಕೈಕಟ್ಟಿ ಕೊಂಡಿರಬೇಕು ಎಂದಲ್ಲ. ತದ್ವಿರುದ್ಧವಾಗಿ, ನಮ್ಮ ದೇಶದ ಜನತಾಂತ್ರಿಕ ಶಕ್ತಿಗಳು, ಶಿಕ್ಷಣವು ನಿಜವಾಗಿಯೂ ಜನರ ಕೈಗೆ ಎಟುಕುವಂತೆ ಆಗಲು, ಶಿಕ್ಷಣವನ್ನು ಸಾರ್ವತ್ರಿಕಗೊಳಿಸಲು, ಧರ್ಮನಿರಪೇಕ್ಷಗೊಳಿಸಲು ಹಾಗೂ ಜನತಾಂತ್ರಿಕ ತತ್ವಗಳಿಗನುಗುಣವಾಗಿ ಶಿಕ್ಷಣ ಪದ್ಧತಿಯನ್ನು ಜನತಾಂತ್ರೀಕರಣಗೊಳಿಸಲು ಶೈಕ್ಷಣಿಕ ಸುಧಾರಣೆಗಾಗಿ ದಿಟ್ಟ ಹೋರಾಟವನ್ನು ನಡೆಸಬೇಕು. ನಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ ಇಂತಹ ಯಾವುದೇ ಸುಧಾರಣೆಯ ಉದ್ದೇಶವು ಜನಸಮೂಹದ ಹೋರಾಟವನ್ನು ಬಲಪಡಿಸಿ ತನ್ಮೂಲಕ ಬೂರ್ಜ್ವಾ ಪ್ರಜಾತಾಂತ್ರಿಕ ಕ್ರಾಂತಿಯ ಅಥವಾ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿಯ ಅಪೂರ್ಣ ಕಾರ್ಯಗಳನ್ನು ನೆರವೇರಿಸುವುದಾಗಿರಬೇಕು. ಅಂದರೆ ನಮ್ಮ ದೇಶದಲ್ಲಿ ಬಹಳ ಕಾಲದಿಂದ ಆಗದೇ

ಉಳಿದಿರುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಯನ್ನು ಪೂರ್ಣಗೊಳಿಸುವುದೇ ಆಗಿರಬೇಕು.

ಭಾರತೀಯ ಬಂಡವಾಳವಾದವು ಬೆಳೆದಂತಹ ವಿಶಿಷ್ಟ ಪರಿಸ್ಥಿತಿಯ ಕಾರಣದಿಂದಾಗಿ ರಾಷ್ಟ್ರೀಯ ವಿಮೋಚನಾ ಚಳುವಳಿಯ ನೇತೃತ್ವ ವಹಿಸಿದ್ದ ರಾಷ್ಟ್ರೀಯ ಬೂರ್ಜ್ವಾಜಿಯು(ಬಂಡವಾಳಶಾಹಿ ವರ್ಗ – ಸಂ.) ಅಧಿಕಾರಕ್ಕೆ ಬರುವ ಹಾದಿಯುದ್ದಕ್ಕೂ ಊಳಿಗಮಾನ್ಯ ಪದ್ಧತಿ (Feudalism) ಹಾಗೂ ಸಾಮ್ರಾಜ್ಯವಾದಗಳೊಂದಿಗೆ ರಾಜಿ ಮಾಡಿಕೊಂಡಿತು. ತತ್ಪರಿಣಾಮವಾಗಿಯೇ, ನಮ್ಮ ಸಮಾಜವನ್ನು ಪ್ರಜಾತಾಂತ್ರೀಕರಣಗೊಳಿಸಲು ಪೂರೈಸಬೇಕಾಗಿದ್ದ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ರಾಂತಿಯ ಕಾರ್ಯವನ್ನು ಇಲ್ಲಿನ ಬಂಡವಾಳವಾದಕ್ಕೆ ನೆರವೇರಿಸಲಾಗಲಿಲ್ಲ, ಹಲವಾರು ಭಾಷೆಗಳನ್ನಾಡುವ ವಿವಿಧ ರಾಷ್ಟ್ರೀಯತೆಗಳನ್ನು, ವಿವಿಧ ಧರ್ಮಗಳನ್ನು ಅನುಸರಿಸುವ ಹಲವಾರು ಸಮುದಾಯಗಳನ್ನು ಒಂದು ರಾಷ್ಟ್ರವಾಗಿ ಬೆಸೆಯಲು ಹಾಗೂ ಒಂದು ನೈಜ ಧರ್ಮನಿರಪೇಕ್ಷ ರಾಜ್ಯವನ್ನು ಸ್ಥಾಪಿಸಲು ಅದರಿಂದ ಸಾಧ್ಯವಾಗಲಿಲ್ಲ. ಇದಲ್ಲದೆ, ಬಂಡವಾಳಶಾಹಿಪದ್ಧತಿಯಲ್ಲಿ ಸಾಮಾನ್ಯ ಜನತೆ ಕೇವಲ ಆರ್ಥಿಕ ಶೋಷಣೆಗೆ ಮಾತ್ರ ಗುರಿಯಾಗಿರುವುದಿಲ್ಲ, ಅವರು ಪ್ರಬಲ ರಾಷ್ಟ್ರೀಯತೆಯಿಂದ ನಡೆಯುವ ದಬ್ಬಾಳಿಕೆಗೂ ಒಳಗಾಗಿರುತ್ತಾರೆ. ಆದುದರಿಂದಲೇ ಇಂದಿಗೂ ಒಂದು ರಾಷ್ಟ್ರೀಯತೆಗಿಂತಲೂ ಹೆಚ್ಚು ರಾಷ್ಟ್ರೀಯತೆಗಳಿರುವ ಎಲ್ಲಾ ಬಂಡವಾಳಶಾಹಿ ದೇಶಗಳಲ್ಲಿ ಬಲಿಷ್ಠ ರಾಷ್ಟ್ರೀಯತೆಯು ಇತರ ರಾಷ್ಟ್ರೀಯತೆಯನ್ನು ಅಥವಾ ಉಳಿದ ಎಲ್ಲ ರಾಷ್ಟ್ರೀಯತೆಗಳನ್ನು ತುಳಿಯುತ್ತಿರುವುದನ್ನು ನಾವು ಕಾಣುತ್ತೇವೆ. ಇದು ನಮ್ಮ ಸಮಾಜದ ಸ್ವಭಾವ ಹಾಗೂ ಗುಣಲಕ್ಷಣಗಳಿಂದ ಸ್ಪಷ್ಟವಾಗಿ ಗೋಚರಿಸುತ್ತದೆ. ನಾವು ರಾಜಕೀಯವಾಗಿ ಒಂದು ರಾಷ್ಟ್ರವಾಗಿ ಬೆಳೆದಿದ್ದರೂ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಇನ್ನೂ ಧರ್ಮ, ಭಾಷೆ, ಜನಾಂಗ, ಜಾತಿ ಇವುಗಳ ಆಧಾರದಲ್ಲಿ ಪ್ರತ್ಯೇಕಿಸಲ್ಪಟ್ಟಿರುವ ವಿವಿಧ ಗುಂಪು ಮತ್ತು ಕೋಮುಗಳ ಸಮ್ಮಿಶ್ರಣವಾಗಿದ್ದೇವೆ.

ಜನತೆಯ ಒಗ್ಗಟ್ಟನ್ನು ಸಾಧಿಸಲು ನಮ್ಮ ಶಿಕ್ಷಣ ಪದ್ಧತಿಯು ನಿಜವಾಗಿಯೂ ಧರ್ಮನಿರಪೇಕ್ಷವಾಗಿರಬೇಕು ಹಾಗೂ ಧಾರ್ಮಿಕ ಪೋಷಣೆಯಿಂದ ಮುಕ್ತವಾಗಿರಬೇಕು, ಅಂದಿನ ಕಾಲದ ರಾಷ್ಟ್ರವಾದಿ ಚಳುವಳಿಯ ನಾಯಕರ ಮತ್ತು ರ್‍ಯಾಡಿಕಲ್ ಎಡಪಂಥೀಯ ನಾಯಕರ ದೆಸೆಯಿಂದ ನಮ್ಮದೇಶದಲ್ಲಿ ಧರ್ಮ ನಿರಪೇಕ್ಷತೆ ಎಂದರೆ ರಾಜ್ಯದ ವತಿಯಿಂದ ಎಲ್ಲಾ ಧರ್ಮಗಳಿಗೂ ಸಮಾನ ಪ್ರೋತ್ಸಾಹವೆಂದು ಅರ್ಥೈಸಲಾಗಿದೆ. ವಾಸ್ತವದಲ್ಲಿ, ಇದು ಧರ್ಮನಿರಪೇಕ್ಷತೆಯ (secular) ಸರಿಯಾದ ಅರ್ಥವಲ್ಲ. ಸರಿಯಾಗಿ ಹೇಳಬೇಕೆಂದರೆ, ಧರ್ಮನಿರಪೇಕ್ಷತೆ (secular) ಎಂದರೆ ಯಾವುದೇ ಅಲೌಕಿಕ ಶಕ್ತಿಯ ಅಸ್ತಿತ್ವಕ್ಕೆ ಮನ್ನಣೆ ನೀಡದಿರುವುದು ಎಂದರ್ಥ. ಹೀಗೆ ಒಂದು ಧರ್ಮನಿರಪೇಕ್ಷ (secular) ರಾಜ್ಯವು

ಧರ್ಮ ಹಾಗೂ ರಾಜ್ಯದ ನಡುವೆ ಯಾವುದೇ ಸಂಬಂಧವಿರದಂತೆ ಮತ್ತು ದೇಶದ ರಾಜಕೀಯ, ಸಾಮಾಜಿಕ ಕ್ರಿಯೆಗಳ ಮೇಲೆ ಹಾಗೂ ಶೈಕ್ಷಣಿಕ ಪದ್ಧತಿಯ ಮೇಲೆ ಧರ್ಮವು ಯಾವುದೇ ಪರಿಣಾಮ ಬೀರದಂತೆ ಧರ್ಮವನ್ನು ಸಂಪೂರ್ಣವಾಗಿ ವೈಯಕ್ತಿಕ ನಂಬಿಕೆಯ ವಿಷಯವನ್ನಾಗಿಸಿ ಅದನ್ನು ಸೂಕ್ತ ಸ್ಥಾನದಲ್ಲಿ ಇರಿಸುತ್ತದೆ. ಒಂದು ಧರ್ಮನಿರಪೇಕ್ಷ (secular) ರಾಜ್ಯದಲ್ಲಿ ಆಸ್ತಿಕರು ಮತ್ತು ನಾಸ್ತಿಕರು ಇಬ್ಬರೂ ಸಹ ಸಮಾನ ಹಕ್ಕುಗಳನ್ನು ಮತ್ತು ಅವಕಾಶಗಳನ್ನು ಹೊಂದಿರುತ್ತಾರೆ. ರಾಜ್ಯವು ಯಾರೊಬ್ಬರ ನಂಬಿಕೆಯಲ್ಲಿಯೂ ತಲೆ ಹಾಕದಿರುವುದು ಮತ್ತು ಅವರ ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡದಿರುವುದು ಒಂದಾದರೆ ಅವರ ಧಾರ್ಮಿಕ ದೌರ್ಬಲ್ಯವನ್ನು ಪ್ರೋತ್ಸಾಹಿಸಿ ತಣಿಸುವುದು ಬೇರೆಯದೇ ಅರ್ಥವನ್ನು ಪಡೆಯುತ್ತದೆ. ಆದ್ದರಿಂದ, ಒಂದು ಧರ್ಮನಿರಪೇಕ್ಷ (secular) ರಾಜ್ಯದ ಧೋರಣೆಯೇನೆಂದರೆ ಅದು ಧರ್ಮಕ್ಕೆ ಸಂಬಂಧಿಸಿದ ನಂಬಿಕೆಯನ್ನು ಪ್ರೋತ್ಸಾಹಿಸುವುದೂ ಇಲ್ಲ ಅಥವಾ ಅದಕ್ಕೆ ಅಡ್ಡಿಯನ್ನುಂಟು ಮಾಡುವುದೂ ಇಲ್ಲ. ಯಾವ ವಿಧದಿಂದಲೂ ಧರ್ಮನಿರಪೇಕ್ಷತೆಯ ಅರ್ಥ, ಸರ್ಕಾರವು ಎಲ್ಲಾ ಧಾರ್ಮಿಕ ನಂಬಿಕೆಗಳಿಗೆ ತನ್ನ ಸಮಾನ ಬೆಂಬಲವನ್ನು ನೀಡತಕ್ಕದ್ದು ಎಂದಲ್ಲ. ಆದರೆ ಧರ್ಮನಿರಪೇಕ್ಷತೆ(secular) ಎಂದರೆ ಎಲ್ಲಾ ಧಾರ್ಮಿಕ ನಂಬಿಕೆಗಳಿಗೆ ಸಮಾನ ಪ್ರೋತ್ಸಾಹವೆಂಬ ವಿಚಿತ್ರ ಕಲ್ಪನೆಯೊಂದನ್ನು ನಮ್ಮ ದೇಶದಲ್ಲಿ ಬೆಳೆಸಲಾಗಿದ್ದು ಅದರ ಕೀರ್ತಿ ಕಾಂಗ್ರೆಸ್ಸಿಗೆ ಮತ್ತು ಮಿಥ್ಯಾ ಕಮ್ಯುನಿಸ್ಟರಿಗೆ ಹಾಗೂ ಸೋಷಲಿಸ್ಟರಿಗೆ ಸಲ್ಲುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮತಾಂಧತೆಯನ್ನು ಉದ್ರೇಕಿಸುವುದರ ಹೊರತು ಬೇರೆ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ? ಮೇಲಾಗಿ ಧರ್ಮನಿರಪೇಕ್ಷತೆಯ ಅರ್ಥ ಎಲ್ಲಾ ಧರ್ಮಗಳಿಗೂ ಸಮಾನ ಪ್ರೋತ್ಸಾಹ ಎಂದಾದರೆ ಭಾರತ ಮತ್ತು ಪಾಕಿಸ್ತಾನಗಳ ವ್ಯತ್ಯಾಸವಿಷ್ಟೇ; ಪಾಕಿಸ್ತಾನವು ಇಸ್ಲಾಮ್ ಧರ್ಮೀಯ ರಾಜ್ಯವಾದರೆ – ಭಾರತವು ಬಹುಧರ್ಮೀಯ (multitheocratic) ರಾಜ್ಯವಾಗುತ್ತದೆ ಎಂಬುದನ್ನು ಈ ವಿಚಾರದ ಪ್ರತಿಪಾದಕರು ಎಂದಾದರೂ ಗಣನೆಗೆ ತೆಗೆದುಕೊಂಡಿದ್ದಾರೆಯೇ?

ಶಿಕ್ಷಣವನ್ನು ಪ್ರಜಾತಾಂತ್ರಿಕ ತತ್ವಗಳಿಗೆ ಅನುಗುಣವಾಗಿ ಸುಧಾರಣೆ ಮಾಡಬೇಕಾದರೆ, ಮೊಟ್ಟಮೊದಲನೆಯದಾಗಿ ಶಿಕ್ಷಣವನ್ನು ಧರ್ಮಗಳ ಪ್ರಭಾವದಿಂದ ಸಂಪೂರ್ಣವಾಗಿ ಮುಕ್ತಗೊಳಿಸುವುದು ಪ್ರಜಾತಂತ್ರಕ್ಕಾಗಿ ಧ್ವನಿಯೆತ್ತುತ್ತಿರುವವರ ಆದ್ಯ ಕರ್ತವ್ಯವಾಗಿತ್ತು. ಆದರೆ ಈ ನಿರೀಕ್ಷೆಗೆ ತದ್ವಿರುದ್ಧವಾಗಿ ಇತ್ತೀಚಿಗೆ ನಮ್ಮ ಶಿಕ್ಷಣ ಪದ್ಧತಿಯು ಸಾಧ್ಯವಾದಷ್ಟು ಧಾರ್ಮಿಕ ಶಿಕ್ಷಣವನ್ನು ಪಠ್ಯಕ್ರಮದಲ್ಲಿ ತರುವ ಮೂಲಕ ಧರ್ಮವನ್ನು ಶಿಕ್ಷಣದಲ್ಲಿ ಬೆರೆಸುವ ಗುರಿಹೊಂದಿದ್ದು, ಆ ಮೂಲಕ ನಮ್ಮ ದೇಶದ ಪ್ರತಿಗಾಮಿ ಶಕ್ತಿಗಳ ಹಿತಾಸಕ್ತಿಯನ್ನು ಅತ್ಯುತ್ತಮವಾಗಿ ಪೂರೈಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಈ ರೀತಿ ಧಾರ್ಮಿಕ ಪರಂಪರೆಗೆ ಶರಣಾಗಿರುವುದರಿಂದ ಪ್ರಜಾಪ್ರಭುತ್ವದ ಎಲ್ಲಾ ಘೋಷಣೆಗಳು ಪೊಳ್ಳು ಮಾತುಗಳಾಗಿ ಹೋಗಿವೆ. ಆದ್ದರಿಂದ ನಮ್ಮ ಪ್ರಸಕ್ತ ಶಿಕ್ಷಣ ವ್ಯವಸ್ಥೆಯಿಂದ ಹೊರಬರುತ್ತಿರುವವರು

ಪ್ರಾಂತೀಯವಾದ, ಕೋಮುವಾದ ಮತ್ತು ಜಾತಿವಾದಗಳಿಗೆ ಬಲಿಬೀಳುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಇದಲ್ಲದೆ, ನಮ್ಮ ಶಿಕ್ಷಣ ವ್ಯವಸ್ಥೆಯು ಹೆಚ್ಚು ಹೆಚ್ಚು ಕೆಲವರಿಗೇ ಸೀಮಿತವಾಗುತ್ತಿದೆ ಮತ್ತು ಅಪ್ರಜಾತಾಂತ್ರಿಕವಾಗುತ್ತಿದೆ. ಸ್ವಾತಂತ್ರ್ಯ ಪೂರ್ವ ದಿನಗಳಲ್ಲಿ ಧ್ವನಿಸಿದ ಉಚಿತ ಸಾರ್ವತ್ರಿಕ ಶಿಕ್ಷಣದ ಬೇಡಿಕೆಗೆ ಇಂದು ದೇಶವನ್ನು ಆಳುತ್ತಿರುವವರಿಂದ ಬಲವಾದ ಏಟು ಬೀಳುತ್ತಿದೆ. ಶಿಕ್ಷಣದ ಗುಣಮಟ್ಟವನ್ನು ಉತ್ತಮಗೊಳಿಸುವ ನೆಪದಲ್ಲಿ ಈಗಿರುವ ಶಿಕ್ಷಣದ ಅವಕಾಶವನ್ನು, ವಿಶಿಷ್ಟವಾಗಿ ಉನ್ನತ ಶಿಕ್ಷಣದ ಅವಕಾಶವನ್ನು ನಿರ್ಬಂಧಿಸಲಾಗುತ್ತಿದೆ. ಶಿಕ್ಷಣವನ್ನು ಹೆಚ್ಚು ಹೆಚ್ಚು ದುಬಾರಿಗೊಳಿಸಲಾಗುತ್ತಿದ್ದು, ಇದರಿಂದ ಶಿಕ್ಷಣದ ಅವಕಾಶಗಳು ಕಡಿತಗೊಳ್ಳುತ್ತಿವೆ. ನಮ್ಮ ವಿದ್ಯಾರ್ಥಿಗಳಿಗೆ ಪ್ರಪಂಚದ ಅತ್ಯಾಧುನಿಕವಾದ, ಸಂಕೀರ್ಣವಾದ, ವೈಜ್ಞಾನಿಕವಾದ ಮತ್ತು ಕ್ರಾಂತಿಕಾರಿಯಾದ ವಿಚಾರಗಳನ್ನು ಕಲಿಸುವಂತಹ ಮತ್ತು ಮಾನವ ಮೌಲ್ಯಗಳನ್ನು ಪೋಷಿಸುವಂತಹ ವಿಷಯಗಳ ಕುರಿತು ನಿರ್ಲಕ್ಷ್ಯ ಬೆಳೆಯುವಂತೆ ಪಠ್ಯಕ್ರಮ ಮತ್ತು ಬೋಧನಾಕ್ರಮಗಳನ್ನು ಸಿದ್ಧಪಡಿಸಲಾಗುತ್ತಿದೆ. ವರ್ಗ ದೃಷ್ಟಿಕೋನದಿಂದ ವಿಶ್ಲೇಷಿಸಿದರೆ, ಹೇಗೆ ಮಾನವಿಕಶಾಸ್ತ್ರಗಳ ವಿಭಾಗದಲ್ಲಾಗಲಿ ಅಥವಾ ವಿಜ್ಞಾನದ ವಿಭಾಗದಲ್ಲಾಗಲಿ ಶೈಕ್ಷಣಿಕ ಕೋರ್ಸುಗಳು, ಆ ವಿಷಯಗಳ ಸಾರದಿಂದಲೇ ವಿಚ್ಛೇದಗೊಂಡು ಸಂಪೂರ್ಣ ಯಾಂತ್ರಿಕ ಜ್ಞಾನವನ್ನೇ ನೀಡುತ್ತಿವೆ ಎಂಬುದನ್ನು ಮನಗಾಣುವುದು ಕಷ್ಟವಾಗುವುದಿಲ್ಲ. ಉದಾಹರಣೆಗೆ ಚರಿತ್ರೆಯ ಒಬ್ಬ ವಿದ್ಯಾರ್ಥಿ ಮಾನವ ಸಮಾಜದ ಬೆಳವಣಿಗೆಯ ನಿಯಮದ ಅಳತೆಗೋಲಿನಲ್ಲಿ ಚರಿತ್ರೆಯ ಘಟನೆಗಳನ್ನು ಹೇಗೆ ವಿಶ್ಲೇಷಿಸಬೇಕು ಮತ್ತು ಹೇಗೆ ಜೊತೆಯಾಗಿ ನೋಡಬೇಕು ಎನ್ನುವ ಸೃಜನಶೀಲ ಜ್ಞಾನವನ್ನು ಬೆಳೆಸಿಕೊಳ್ಳದೆ ಕೇವಲ ಚಾರಿತ್ರಿಕ ಘಟನೆಗಳ ಕುರಿತಾದ ಕೆಲವು ಮಾಹಿತಿಗಳನ್ನು ತಲೆಯಲ್ಲಿ ತುಂಬಿಕೊಂಡು ವಿಶ್ವವಿದ್ಯಾನಿಲಯದಿಂದ ಹೊರಬರುತ್ತಾನೆ. ವಿಜ್ಞಾನದ ಅಧ್ಯಯನದ ಪರಿಸ್ಥಿತಿಯೂ ಹಾಗೆಯೇ ಇದೆ. ವಿಜ್ಞಾನದ ತತ್ವಶಾಸ್ತ್ರ ಮತ್ತು ನೀತಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ ಮೊದಲಾದವುಗಳನ್ನು ಕೇವಲ ತಾಂತ್ರಿಕ ಜ್ಞಾನವನ್ನು ಪಡೆದುಕೊಳ್ಳುವಂತೆ ಕಲಿಸಲಾಗುತ್ತಿದೆ. ಇದರಿಂದಾಗಿ ವಿಜ್ಞಾನದ ಬಹುತೇಕ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಕಲಿಕೆ ಮುಗಿದ ಮೇಲೂ ಕೂಡ ಜೀವನದಲ್ಲಿ ಎದುರಿಸಬೇಕಾದಂತಹ ವಿವಿಧ ಸಮಸ್ಯೆಗಳನ್ನು ಕುರಿತಂತೆ ಸಮರ್ಪಕವಾಗಿ ವೈಜ್ಞಾನಿಕ ಮತ್ತು ಕ್ರಮಬದ್ಧವಾದ ದೃಷ್ಟಿಕೋನವನ್ನು ಗಳಿಸಿಕೊಳ್ಳದೆ ಇರುವಂತಹ ಚಿಂತಾಜನಕ ಸ್ಥಿತಿಯನ್ನು ಕಾಣುತ್ತಿದ್ದೇವೆ.

ನೀತಿಯ ಕುರಿತಾದ ಕನಿಷ್ಟ ಮಟ್ಟದ ತಿಳುವಳಿಕೆಯ ಅಭಾವದಿಂದಾಗಿ, ನಮ್ಮ ವಿದ್ಯಾರ್ಥಿಗಳಲ್ಲಿ ಯುವಜನರಲ್ಲಿ ಹಾಗೂ ಬುದ್ಧಿಜೀವಿಗಳಲ್ಲಿ ಯಾವುದೇ ಸಾಮಾಜಿಕ ಸಮಸ್ಯೆಯ ಕುರಿತೇ ಆಗಲೀ, ಅದರ ಬಗ್ಗೆ ಉದಾಸೀನದ ಮತ್ತು ನಿರ್ಲಕ್ಷ್ಯದ ಮನೋಭಾವ ಬೆಳೆಯುತ್ತಿದೆ. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕವಾದ ಮತ್ತು ಕ್ರಮಬದ್ಧವಾದ ವಿಶ್ಲೇಷಣಾ ಸಾಮರ್ಥ್ಯವನ್ನು

ಬೆಳೆಸುವ ಬದಲು, ಆಧ್ಯಾತ್ಮವಾದ ಮತ್ತು ವಿಜ್ಞಾನಗಳ ವಿಚಿತ್ರ ಸಮ್ಮಿಶ್ರಣವನ್ನು ತರುವ ಪ್ರವೃತ್ತಿ ಬೆಳೆಯುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ. ಇದು ಫ್ಯಾಸಿವಾದಿ ಸಂಸ್ಕೃತಿಯ ಗುಣಲಕ್ಷಣವಾದ್ದರಿಂದ ನಮ್ಮ ಶಿಕ್ಷಣದ ಬದುಕಿನಲ್ಲಿ ಈ ಪ್ರವೃತ್ತಿ ನಿಜವಾಗಿಯೂ ಆಘಾತಕಾರಿಯಾಗಿದೆ. ವಿಜ್ಞಾನದ ಜೊತೆ ಆಧ್ಯಾತ್ಮವಾದದ ವಿಚಿತ್ರ ಸಮ್ಮಿಶ್ರಣವೇ ಫ್ಯಾಸಿವಾದ. ಇದು ಫ್ಯಾಸಿಸ್ಟ್ ರಾಜ್ಯದ ಆರ್ಥಿಕ ಮತ್ತು ಮಿಲಿಟರಿ ಸಾಮರ್ಥ್ಯವನ್ನು ವೃದ್ಧಿಪಡಿಸಿ ಬಲಗೊಳಿಸಲು ವಿಜ್ಞಾನದ ತಾಂತ್ರಿಕ ಅಂಶಗಳನ್ನು ಅಳವಡಿಸಿಕೊಳ್ಳುತ್ತದೆ. ನೀತಿ ಮತ್ತು ಸಂಸ್ಕೃತಿಗಳ ವಿಷಯದಲ್ಲಿ ಅದು ರಾಷ್ಟ್ರೀಯ ಸಂಸ್ಕೃತಿ ಮತ್ತು ಪರಂಪರೆಯ ಹೆಸರಿನಲ್ಲಿ ಎಲ್ಲಾ ರೀತಿಯ ವಿಜ್ಞಾನ–ವಿರೋಧಿ ಧಾರ್ಮಿಕ ಅಂಧಶ್ರದ್ಧೆಗಳನ್ನು ಜನರ ಮನಸ್ಸಿನಲ್ಲಿ ತುಂಬಿ, ಜನರ ಮಾನಸಿಕ ಪ್ರಕ್ರಿಯೆಯನ್ನು ಕಾರ್ಯ–ಕಾರಣ ಸಂಬಂಧದ ವೈಜ್ಞಾನಿಕ ಪಥದಿಂದ, ಅಂಧಶ್ರದ್ಧೆ, ಪೂರ್ವಗ್ರಹ ಮತ್ತು ಪ್ರಗತಿವಿರೋಧಿಯಾದ ನಿಗೂಢವಾದಿ (obscurantist) ಹಾದಿಗೆ ಇಳಿಸಿ, ಅಂತಿಮವಾಗಿ ಸಾಮಾಜಿಕ ಕ್ರಿಯೆಯ ಬಗ್ಗೆ ಅಸಡ್ಡೆ ಬೆಳೆಸುತ್ತದೆ. ನಮ್ಮ ಸಾಂಸ್ಕೃತಿಕ ಜೀವನದಲ್ಲಿ ಈ ಎಲ್ಲಾ ಚಿಹ್ನೆಗಳು ಸ್ಪಷ್ಟವಾಗಿ ಕಾಣುತ್ತಿವೆ. ಆದುದರಿಂದ ಇದರ ಅನಿವಾರ್ಯ ತೀರ್ಮಾನವೆಂದರೆ, ಫ್ಯಾಸಿವಾದವು ನಮ್ಮ ಸಮಾಜದ ಸಾಂಸ್ಕೃತಿಕ ಜೀವನದಲ್ಲಿ ಆಳವಾಗಿ ಪ್ರವೇಶಿಸಿದೆ ಎಂಬುದು.

ರಾಷ್ಟ್ರೀಯ ನಾಯಕರು ಯುವಪೀಳಿಗೆಗೆ ಒಳ್ಳೆಯ ನಾಗರಿಕರಾಗುವಂತೆ ಉಪದೇಶಗಳನ್ನು ನೀಡುತ್ತಾರೆ. ಅತ್ಯಂತ ವೈಭವದಿಂದ ಎಲ್ಲಾ ಮಹಾ ಪುರುಷರ ವಾರ್ಷಿಕೋತ್ಸವಗಳನ್ನು ಆಚರಿಸುತ್ತಾರೆ. ಆದರೂ, ಕ್ಷುಲ್ಲಕ ಸ್ವಾರ್ಥ, ನೈತಿಕ ಅಧೋಗತಿ ಹಾಗೂ ಸಾಮಾಜಿಕ ಚಟುವಟಿಕೆಯ ಬಗ್ಗೆ ತಣ್ಣನೆಯ ಉದಾಸೀನತೆ ಇವೆಲ್ಲವೂ ಯುವಜನರ ಜೀವಚೈತನ್ಯವನ್ನೇ ತಿಂದು ಬಿಡುತ್ತಿರುವುದನ್ನು ನಾವು ಕಾಣುತ್ತಿಲ್ಲವೇ? ಕೆಲವೇ ವರ್ಷಗಳ ಹಿಂದೆ, ವಿದೇಶೀ ಆಳ್ವಿಕೆಯ ಕಾಲದಲ್ಲಿ ಅನ್ಯಾಯ ದಬ್ಬಾಳಿಕೆಗಳ ವಿರುದ್ಧ ಸಾಮಾಜಿಕ ಕ್ರಿಯಾಶೀಲತೆ ಹಾಗೂ ರಾಷ್ಟ್ರೀಯ ಹುಮ್ಮಸ್ಸಿನಿಂದ ಕುದಿಯುತ್ತಿದ್ದ ತಲೆಮಾರೊಂದು ಇದೀಗ, ನೈತಿಕ ಅಧಃಪತನದ ಈ ವಿಕಾರವಾದ ಲಕ್ಷಣಗಳನ್ನು ಪ್ರದರ್ಶಿಸುತ್ತಿರುವುದೇಕೆ? ಖಂಡಿತವಾಗಿಯೂ, ಇದೀಗ ನಮ್ಮ ಮಕ್ಕಳು ಹುಟ್ಟಿನಿಂದಲೇ ನೀತಿಗೆಟ್ಟವರು ಹಾಗೂ ಭ್ರಷ್ಟರಾಗಿಲ್ಲ. ಈ ಅಧ:ಪತನ ದೇಶದ ಸಾಮಾನ್ಯ ವಾತಾವರಣದಲ್ಲೇ ಇರುವಂತಹದ್ದು; ನೈತಿಕ ಮಟ್ಟದ ಈ ಕುಸಿತಕ್ಕೆ ಫಲವತ್ತಾದ ಕ್ಷೇತ್ರವನ್ನು ಈ ವ್ಯವಸ್ಥೆ ಒದಗಿಸಿದೆ. ಆದ್ದರಿಂದ ಸಾಮಾಜಿಕ ರಾಜಕೀಯ ಮತ್ತು ಸಾಂಸ್ಕೃತಿಕ ಜೀವನದಲ್ಲಿರುವ ಪ್ರಸಕ್ತ ಬಿಕ್ಕಟ್ಟಿನ ಮೂಲಕಾರಣಗಳನ್ನು ಶೋಧಿಸದೆ ನಮ್ಮ ಯುವಜನರಲ್ಲಿರುವ ಕ್ಷುಲ್ಲಕ ಸ್ವಾರ್ಥ, ನೈತಿಕ ಅಧಃಪತನ ಮತ್ತು ಸಾಮಾಜಿಕ ಕ್ರಿಯೆಯ ಕುರಿತಾದ ತಣ್ಣನೆಯ ಉದಾಸೀನತೆಯ ಬಗ್ಗೆ ಸುಮ್ಮನೆ ಗೊಣಗಾಡಿದರೆ ಯಾವ ಉದ್ದೇಶವನ್ನು ಸ್ಪಷ್ಟವಾಗಿ ಸಾಧಿಸಲಾಗದು.

ಸಮಾಜ ರಚನೆಯ ಒಂದು ವಿಶಿಷ್ಟ ಹಂತದಲ್ಲಿ ಪ್ರಗತಿಪರವಾದ, ಕ್ರಾಂತಿಕಾರಿಯಾದ ಪಾತ್ರ ವಹಿಸುವ ಒಂದು ತತ್ವಶಾಸ್ತ್ರ , ವಿಚಾರಧಾರೆ ಹಾಗೂ ನಿರ್ದಿಷ್ಟ ಪ್ರಕಾರದ ಮೌಲ್ಯಪ್ರಜ್ಞೆ

ಇವೆಲ್ಲವೂ ಸಮಾಜ ರಚನೆಯ ಇನ್ನೊಂದು ಹಂತದಲ್ಲಿ ಪ್ರತಿಗಾಮಿ ಅಸ್ತ್ರವಾಗುತ್ತವೆ. ರಾಷ್ಟ್ರೀಯ ವಿಮೋಚನಾ ಹೋರಾಟದಲ್ಲಿ ನಾವು ಎತ್ತಿಹಿಡಿದಂತಹ ಬೂರ್ಜ್ವಾ ಮಾನವತಾವಾದದ ಮೌಲ್ಯಗಳು ಹಾಗೂ ಬೂರ್ಜ್ವಾ ರಾಷ್ಟ್ರವಾದದ ವಿಚಾರಧಾರೆಗಳಿಗೆ ಸಂಬಂಧಿಸಿದಂತೆಯೂ ನಾವು ಇದನ್ನೇ ನೋಡುತ್ತೇವೆ. ಸ್ವಾತಂತ್ರ್ಯ ಪೂರ್ವ ಅವಧಿಯಲ್ಲಿ ಬೂರ್ಜ್ವಾ ರಾಷ್ಟ್ರವಾದ ಹಾಗೂ ಬೂರ್ಜ್ವಾ ಮಾನವತಾವಾದದ ಪರಿಕಲ್ಪನೆಗಳು ಆಗ ಒಂದು ಸೌಕರ್ಯ ಸಾಧನವಾಗಿರಲಿಲ್ಲ. ಆಗ ಅವುಗಳು ಸಮಾಜದ ಸಾಮೂಹಿಕ ಹಿತಾಸಕ್ತಿಯೊಂದಿಗೆ ಪ್ರಧಾನವಾಗಿ ಐಕ್ಯವಾಗಿದ್ದವು. ಆದ್ದರಿಂದ ಅದು ಚಾರಿತ್ರಿಕವಾಗಿ ಪ್ರಗತಿಪರ ಕ್ರಾಂತಿಕಾರಿ ಪಾತ್ರವನ್ನು ಹೊಂದಿತ್ತು. **ರಾಷ್ಟ್ರೀಯ ಸ್ವಾತಂತ್ರ್ಯ ದೊರಕಿದ ಮೇಲೆ** ಮತ್ತು ನಮ್ಮ ದೇಶದಲ್ಲಿ ಬೂರ್ಜ್ವಾ ಆಳ್ವಿಕೆ ಸ್ಥಾಪನೆಯಾದ ಮೇಲೆ ರಾಷ್ಟ್ರವಾದದ ಮತ್ತು ಬೂರ್ಜ್ವಾ ಮಾನವತಾವಾದದ ಮೌಲ್ಯಪ್ರಜ್ಞೆಗಳು ತಮ್ಮ ಪ್ರಗತಿಪರ ವೈಚಾರಿಕತೆಯ ಹಾಗೂ ಕ್ರಾಂತಿಕಾರಕವಾದ ಪಾತ್ರವನ್ನು ಕಳೆದುಕೊಂಡು ಆಳುವ ಬೂರ್ಜ್ವಾಜಿಗಳ ಕೈಯಲ್ಲಿ ವಿಶೇಷವಾದ ಸೌಕರ್ಯಗಳನ್ನು ಸಾಧಿಸಿಕೊಳ್ಳುವ ಸವಲತ್ತಾಗಿವೆ. ಹಾಗೂ ಅವು ಅಂತಿಮವಾಗಿ ಸಾಮಾಜಿಕ ಪ್ರಗತಿಯ ಹಾದಿಗೆ ಅಡ್ಡವಾಗಿ ನಿಲ್ಲುತ್ತವೆ. ಅಲ್ಲದೆ, ಇಂದು ರಾಷ್ಟ್ರವಾದಿಯಾಗಲು ಯಾವುದೇ ತ್ಯಾಗದ ಅವಶ್ಯಕತೆಯಿಲ್ಲ, ಚಾರಿತ್ರಿಕವಾಗಿ ಕಾರ್ಮಿಕವರ್ಗದ ವರ್ಗ ಹಿತಾಸಕ್ತಿಯೊಡನೆ ಐಕ್ಯವಾಗಿರುವ ಸಮಾಜದ ಸಾಮೂಹಿಕ ಹಿತಾಸಕ್ತಿಯನ್ನು ಅದು ಪ್ರತಿನಿಧಿಸುವುದಿಲ್ಲ. ಇಂದು ಅದು ಮುಖ್ಯವಾಗಿ ಸಮಾಜದ ಪ್ರಗತಿಪರ ಮತ್ತು ಕ್ರಾಂತಿಕಾರಿ ಚಳುವಳಿಗೆ ವಿರುದ್ಧವಾಗಿ ನಿಂತಿದೆ. ಆದ್ದರಿಂದ ಒಂದು ಕಾಲದಲ್ಲಿ ಯಾವ ಒಂದು ಪತಾಕೆಯನ್ನು ನಾವು ಎತ್ತಿಹಿಡಿದಿದ್ದೆವೋ, ಯಾವುದು ರಾಷ್ಟ್ರೀಯ ವಿಮೋಚನಾ ಹೋರಾಟದ ಕಾಲಘಟ್ಟದಲ್ಲಿ ಸಂಪೂರ್ಣವಾಗಿ ಪ್ರಗತಿಪರ ಮತ್ತು ಕ್ರಾಂತಿಕಾರಕ ಚಳುವಳಿಯ ಪಥದ ಚಲನಶಕ್ತಿಯಾಗಿತ್ತೋ ಆ ವೈಚಾರಿಕತೆ ಮತ್ತು ಮೌಲ್ಯಪ್ರಜ್ಞೆಗಳು ಆಳುವ ಬೂರ್ಜ್ವಾಜಿಗಳ ಕೈಯಲ್ಲಿ ಒಂದು ಸವಲತ್ತಾಗಿ ಮಾರ್ಪಟ್ಟಿದ್ದು, ಇಂದು ಪೂರ್ತಿಯಾಗಿ ನಿಶ್ಶೇಷವಾಗಿರುವುದನ್ನು ಕಾಣುತ್ತೇವೆ.

ಮೇಲಾಗಿ, ವಿದ್ಯಾರ್ಥಿ ಯುವಜನರಲ್ಲಿ ನೈತಿಕತೆಯ ಯಾವುದೇ ತಿಳುವಳಿಕೆಯನ್ನೂ ಮೂಡಿಸದೆ ಆ ಕಾರಣದಿಂದ ಸಾಮಾಜಿಕ ಹೊಣೆಗಾರಿಕೆಯ ಯಾವುದೇ ಪರಿಜ್ಞಾನವನ್ನೂ ಮೂಡಿಸದೇ ಇರುವ ಈ ಶಿಕ್ಷಣ ಪದ್ಧತಿಯಿಂದ ನಮ್ಮ ಸಾಮಾಜಿಕ ಸಾಂಸ್ಕೃತಿಕ ಜೀವನದಲ್ಲಿನ ವ್ಯಾಧಿಯು ಮತ್ತಷ್ಟು ತೀವ್ರಗೊಂಡಿದೆ. ಒಬ್ಬರು ಯಾವುದೇ ಹಕ್ಕನ್ನು ಪ್ರತಿಪಾದಿಸುವ ಮೊದಲು ಸಮಾಜಕ್ಕೆ ತಮ್ಮ ಕರ್ತವ್ಯವನ್ನು ನೆರವೇರಿಸಬೇಕೆಂಬುದು ನೀತಿಶಾಸ್ತ್ರದ ಮೂಲ ಬೋಧನೆಯಾಗಿರಬೇಕು.

ಇಂದು ನಮ್ಮ ಸಮಾಜವು ವೈಚಾರಿಕತೆ ಮತ್ತು ಸಂಸ್ಕೃತಿಯ ಕ್ಷೇತ್ರಗಳಲ್ಲಿ ತೀವ್ರತರವಾದ ಬಿಕ್ಕಟ್ಟಿನ ಕಾಲಘಟ್ಟದಲ್ಲಿ ಸಾಗುತ್ತಿದೆ. ನಮ್ಮ ಯುವಪೀಳಿಗೆಯನ್ನು ಸಾಮಾಜಿಕ ಕ್ರಿಯೆಗೆ ಪ್ರೇರೇಪಿಸಲು ಸಮರ್ಥವಾದ ಒಂದು ಹೊಸ ತತ್ವಶಾಸ್ತ್ರ, ಒಂದು ಹೊಸ ವಿಚಾರಧಾರೆಯು

ಹೊರಹೊಮ್ಮಬೇಕಿದೆ. ನಮ್ಮ ದೇಶಾಭಿಮಾನವನ್ನು ಕಾರ್ಮಿಕವರ್ಗದ ಅಂತರರಾಷ್ಟ್ರೀಯವಾದದೊಂದಿಗೆ ಬೆಸೆಯಬಲ್ಲ ವೈಜ್ಞಾನಿಕ ಸಮಾಜವಾದದ ವಿಚಾರಧಾರೆಯೊಂದೇ ಇಂದಿನ ಬಿಕ್ಕಟ್ಟಿನಿಂದ ಹೊರಬರಲು ಇರುವ ಮಾರ್ಗವಾಗಿದೆ. ಏಕೆಂದರೆ ನಮ್ಮ ಸಮಾಜ ರಚನೆಯ ಈ ಹಂತದಲ್ಲಿ ಕಾರ್ಮಿಕವರ್ಗದ ಅಂತರರಾಷ್ಟ್ರೀಯವಾದದಿಂದ ಮಾರ್ಗದರ್ಶನ ಪಡೆದ ದೇಶಾಭಿಮಾನ ಮಾತ್ರ ಸಮಾಜದ ಸಾಮೂಹಿಕ ಹಿತಾಸಕ್ತಿಯನ್ನು ಪ್ರತಿನಿಧಿಸುತ್ತದೆ. ಅದು ಎಲ್ಲಾ ಸವಲತ್ತುಗಳ ವಿರುದ್ಧ ಹೋರಾಡಲು ಶ್ರಮಜೀವಿಗಳ ಕೈಗೆ ಒಂದು ಅಜೇಯ ವೈಚಾರಿಕ ಅಸ್ತ್ರವನ್ನು ನೀಡುತ್ತದೆ. ದ್ವಂದ್ವಾತ್ಮಕ ವಸ್ತುವಾದ ಮಾತ್ರವೇ ಕೊಳೆಯುತ್ತಿರುವ ಎಲ್ಲವನ್ನೂ ಕಿತ್ತೊಗೆದು ಜನತೆಯ ನೈತಿಕ ಮಟ್ಟವನ್ನು ಮೇಲೆತ್ತುವ ಸಾಮರ್ಥ್ಯ ಹೊಂದಿರುವುದರಿಂದ, ಅದು ಎಲ್ಲಾ ರೀತಿಯ ಅನ್ಯಾಯ ಮತ್ತು ಸವಲತ್ತುಗಳ ವಿರುದ್ಧ ಹೋರಾಡುವ ಏಕೈಕ ತತ್ವಶಾಸ್ತ್ರವಾಗಿದ್ದು, ಅದು ತ್ಯಾಗ ಮತ್ತು ಆತ್ಮ ಸಮರ್ಪಣೆಗಳನ್ನು ಬಯಸುತ್ತದೆ.

ಆದ್ದರಿಂದ, ಜನತೆಯ ನೈತಿಕ ಮಟ್ಟವನ್ನು ಮೇಲೊಯ್ಯುವ ಸಲುವಾಗಿ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸಲು ಬಯಸುವವರು ಅದನ್ನು ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಯ ವಿಶಾಲ ದೃಷ್ಟಿಯಿಂದ ಪರಿಗಣಿಸಬೇಕು. ಇಲ್ಲದಿದ್ದರೆ ನಾಯಕರಿಂದ ಎಷ್ಟೇ ಉಪದೇಶಗಳ ಸುರಿಮಳೆಯಾಗಲಿ, ಅನೇಕ ಆಯೋಗಗಳ ನೇಮಕವಾಗಲಿ, ಏನೇ ಆದರೂ, ಏಕೆ ಯುವಜನಾಂಗದ ಸಾಂಸ್ಕೃತಿಕ ಮಟ್ಟ ಒಂದೇ ಸಮನೆ ಅವನತಿಯನ್ನು ಹೊಂದುತ್ತಿದೆ ಎಂಬ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ. ಒಟ್ಟಿನಲ್ಲಿ, ಬೂರ್ಜ್ವಾಜಿಯು ಪ್ರಸಕ್ತ ಯುಗದಲ್ಲಿ ನೆರವೇರಿಸಲು ಅಸಮರ್ಥವಾಗಿ ಉಳಿದಿರುವ ಅಪೂರ್ಣ ಕಾರ್ಯಗಳೊಂದಿಗೆ ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸುವ ಕಾರ್ಯವು, ಬೇರ್ಪಡಿಸಲಾಗದಂತೆ ಬೆಸೆದುಕೊಂಡಿದೆ. ಭಾರತದಲ್ಲಿ ಬಂಡವಾಳಶಾಹಿ ಶೋಷಣೆಯ ನೊಗದಿಂದ ವಿಮೋಚನೆ ಪಡೆಯಲು ಹೋರಾಡುತ್ತಿರುವ ಕಾರ್ಮಿಕವರ್ಗದ ಮೂಲ ವಿಚಾರಧಾರೆ ಮತ್ತು ರಾಜಕೀಯದೊಂದಿಗೆ ಶೈಕ್ಷಣಿಕ, ನೀತಿ ನೈತಿಕತೆಯ ಕುರಿತಾದ ಧೋರಣೆಯನ್ನು ಸಂಯೋಜಿಸುವ ಮಹತ್ಕಾರ್ಯವು ಕ್ರಾಂತಿಕಾರಿಗಳ, ಪ್ರಗತಿಪರ ಚಿಂತಕರ ಮತ್ತು ಶಿಕ್ಷಣ ತಜ್ಞರ ಮುಂದಿದೆ. ನಾನು ಮೇಲೆ ಎತ್ತಿರುವ ಪ್ರಶ್ನೆಗಳ ಬಗ್ಗೆ ಓದುಗರು ಗಂಭೀರವಾಗಿ ಚಿಂತಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.